ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೦೪

## ಪಟ್ಟಿ – ೦೭

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತ ನಾಲ್ಕನೇ ಅಧಿವೇಶನ

ಮಂಗಳವಾರ, ದಿನಾಂಕ : ೧೭ನೇ ಡಿಸೆಂಬರ್, ೨೦೨೪

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

# ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ

**ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೮೮ (೯೦೪) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಇಲ್ಲಿಯವರೆಗೆ ಯಾವುದಾದರೂ ಸರ್ಕಾರಿ ನೌಕರರ/ಖಾಸಗಿ (ಸಾಮಾನ್ಯ ವರ್ಗದ/ಮೀಸಲು ವರ್ಗದ) ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಬಡಾವಣೆ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಸರ್ಕಾರಿ ಜಮೀನಿನ ಭೂ ಮಂಜೂರಾತಿ ಪಡೆಯಲಾಗಿದೆಯೇ ; (ಸಂಘವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳಿಗೆ ಸರ್ಕಾರವು ನಿಗದಿಪಡಿಸಿರುವ ಕಾರ್ಯವಿಧಾನಗಳು ಮತ್ತು ಈ ಸಂಘಗಳು ತಮ್ಮ ಬೈಲಾಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕಾದ ನಿಯಮಗಳಾವುವು ; ಈ ನಿಯಮಗಳನ್ನು ಅಳವಡಿಸಿಕೊಂಡಿರುವ ಯಾವುದಾದರೂ ಸಂಘದ ಮಾದರಿ ಬೈಲಾ ಪ್ರತಿಯನ್ನು ನೀಡುವುದು ;

(ಇ) ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಬಡಾವಣೆ ನಿರ್ಮಾಣ ಮಾಡಲು ಮತ್ತು ಅಂತಹ ಅಭಿವೃದ್ಧಿ ಪಡಿಸಿದ ಬಡಾವಣೆಗಳಲ್ಲಿ ತನ್ನ ನೊಂದಾಯಿತ ಸದಸ್ಯರಿಗೆ/ಷೇರುದಾರರಿಗೆ ನಿವೇಶನ ಹಂಚಿಕೆಯಲ್ಲಿ ಅನುಸರಿಸಬೇಕಾದ ನಿಯಮಗಳು, ಮಾರ್ಗಸೂಚಿಗಳು ಮತ್ತು ಇತರೆ ಯಾವುದೇ ಮಾನದಂಡಗಳಾವುವು ? (ವಿವರಗಳನ್ನು ನೀಡುವುದು)

## ಹಟ್ಟಿ ಮತ್ತು ಚಿನ್ನದ ಕಂಪನಿಗಳ ನೇಮಕಾತಿ ಬಗ್ಗೆ

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೮೯ (೯೬೮) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) *ಕರ್ನಾಟಕದ ರಾಜ್ಯ ಉದ್ಯಮಿಗಳಿಂದ ಹಟ್ಟಿ ಚಿನ್ನದ ಗಣಿ, ಕಂಪನಿ ನಿಯಮಿತದಲ್ಲಿ ನೇಮಕಾತಿಗೆ ಅರ್ಜಿ ಕರೆಯಲಾಗಿದೆಯೇ ;

(ಆ) ನೇಮಕಾತಿಗೆ ಅರ್ಜಿ ಕರೆದಿದ್ದಲ್ಲಿ ಪ್ರಕ್ರಿಯೆಯು ಯಾವ ಹಂತದಲ್ಲಿದೆ ; ಯಾವಾಗ ಪೂರ್ಣಗೊಳ್ಳುವುದು ?

## M.S.M.F ವಲಯ ಉತ್ತೇಜನಕ್ಕಾಗಿ ಯೋಜನೆ ಮತ್ತು ರಿಯಾಯಿತಿಗಳು

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೦ (೯೬೭) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರಾಜ್ಯದ M.S.M.F ವಲಯದ ಉತ್ತೇಜನಕ್ಕಾಗಿ ಘೋಷಿಸಿರುವ ಯೋಜನೆಗಳು ಹಾಗೂ ರಿಯಾಯಿತಿಗಳೇನು ;

(ಆ) ಎಷ್ಟರ ಮಟ್ಟಿಗೆ ರಾಜ್ಯದ M.S.M.F ಗಳ ಈ ಯೋಜನೆ ಮತ್ತು ರಿಯಾಯಿತಿಗಳ ಲಾಭ ಪಡೆದುಕೊಂಡಿವೆ ಮತ್ತು ಯೋಜನೆಗಳ ಲಾಭ ಮತ್ತು ರಿಯಾಯಿತಿಗಳನ್ನು ತಲುಪಿಸುವುದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಈ ಸಂಬಂಧ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆಯೇ ?

## ಶಿವಮೊಗ್ಗ ಜಿಲ್ಲೆಯ ರಸ್ತೆ ಗುಂಡಿಗಳ ಮುಚ್ಚುವ ಬಗ್ಗೆ

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೧ (೯೬೬) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ರಸ್ತೆ ಗುಂಡಿಗಳ ಅಸಮರ್ಪಕ ನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ನಿರಂತರ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ಎಷ್ಟು ರಸ್ತೆ ಗುಂಡಿಗಳನ್ನು ಗುರುತಿಸಿ ಮುಚ್ಚಲಾಗಿದೆ ಮತ್ತು ಇದಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು; (ವಿಧಾನಸಭಾವಾರು ಮಾಹಿತಿ ಒದಗಿಸುವುದು)

(ಇ) ರಸ್ತೆ ಗುಂಡಿಗಳನ್ನು ಮುಚ್ಚಿಸಲು ವಿಶೇಷ ಕಾರ್ಯಚರಣೆ ಹಮ್ಮಿಕೊಂಡಿದ್ದರೂ ಸಹ ಮತ್ತೆ ರಸ್ತೆಗಳಲ್ಲಿ ಗುಂಡಿಗಳಾಗಿ ಸಾರ್ವಜನಿಕರ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಗುಂಡಿಗಳನ್ನು ಯಾವಾಗ ಮುಚ್ಚಿಸಲಾಗುವುದು ;

(ಈ) ಇಂತಹ ಘಟನೆಗೆ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ?

## ನಕಲಿ ಠೇವಣಿ ಬಾಂಡ್ ಸೃಷ್ಟಿಸಿ ಅಕ್ರಮ ಮಾಡಿರುವ ಬಗ್ಗೆ

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೨ (೯೭೦) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಕೋ-ಆಪರೇಟಿವ್ ಸೊಸೈಟಿಯಲ್ಲಿ ನಕಲಿ ಠೇವಣಿ ಬಾಂಡ್ ಸೃಷ್ಟಿಸಿ ಅಕ್ರಮ ಹಣ ವರ್ಗಾವಣೆ ಮಾಡಿಕೊಂಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಪ್ರಕರಣಗಳಲ್ಲಿ ಶಾಮೀಲಾದ ಅಧಿಕಾರಿ/ನೌಕರರು ಯಾರು ; (ವಿವರ ನೀಡುವುದು) ಮತ್ತು ಎಷ್ಟು ಮೊತ್ತದ ಅಕ್ರಮ ಹಣ ವರ್ಗಾವಣೆ ಮಾಡಲಾಗಿದೆ ;

(ಇ) ಈ ಸಂಬಂಧ ಸರ್ಕಾರ ತಪ್ಪಿಸ್ಥರ ವಿರುದ್ಧ ತೆಗೆದುಕೊಂಡ ಕಾನೂನು ಕ್ರಮಗಳೇನು ? (ವಿವರಿಸುವುದು)

## ಗ್ರಾಮ ಪಂಚಾಯಿತಿ, ನಗರ ಸಭೆ, ಪುರಸಭೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೭೯೩ (೯೬೯) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರ ರಚನೆಯಾದ ನಂತರ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ನಗರ ಪಾಲಿಕೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಅಧಿಸೂಚನೆ ಹೊರಡಿಸಿದೆಯೇ ; ಹಾಗೂ ಗ್ರಾಮ ಪಂಚಾಯಿತಿ ಹಾಗೂ ಪುರಸಭೆ, ನಗರ ಸಭೆಗಳನ್ನಾಗಿ ಹೊರಡಿಸಿದ್ದಲ್ಲಿ ಪ್ರಸ್ತುತ ಪಾಲಿಕೆಗಳನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ಅದರ ಪ್ರತಿ ಲಗತ್ತಿಸುವುದು)

(ಆ) ಇವುಗಳ ನಿರ್ವಹಣೆಗೆ ಮಾಡಲು ಅಧಿಕಾರಿಗಳನ್ನು ನೇಮಕ ಮಾಡಲಾಗಿದೆಯೇ ಅಥವಾ ಹುದ್ದೆಗಳ ಸೃಜನೆಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೯೪ (೯೫೫) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಷ್ಟು ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಇವುಗಳಲ್ಲಿ ಎಷ್ಟು ಸಹಕಾರ ಸಂಘಗಳು ಸ್ವಂತ ಕಟ್ಟಡ ಹೊಂದಿವೆ ; ಹಾಗೂ ಎಷ್ಟು ಬಾಡಿಗೆ ಕಟ್ಟಡಗಳನ್ನು ಹೊಂದಿವೆ ? (ವಿವರ ನೀಡುವುದು)

## ಸ್ವ-ಸಹಾಯ ಸಂಘಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :-**

೭೯೫ (೯೯೪) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಷ್ಟು ಸ್ವ-ಸಹಾಯ ಸಂಘಗಳು ನೋಂದಾವಣಿಯಾಗಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸ್ವ-ಸಹಾಯ ಸಂಘಗಳ ನೋಂದಾವಣಿಗೆ ಇರುವ ಮಾನದಂಡಗಳೇನು ;

(ಇ) ಉಳಿತಾಯ ಅಲ್ಲದೇ ಬೇರೆ ಯಾವ ವೃತ್ತಿಯಲ್ಲಿ ಈ ಸ್ವ-ಸಹಾಯ ಸಂಘಗಳು ತೊಡಗಿವೆ ? (ವಿವರ ನೀಡುವುದು)

## ಅಲ್ಪಸಂಖ್ಯಾತರ ಸಮುದಾಯದವರುಗಳಿಗೆ ರೂಪಿಸಿರುವ ಯೋಜನೆಗಳ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) :-**

೭೯೬ (೯೯೭) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಇಲಾಖೆಯಲ್ಲಿ ಅಲ್ಪಸಂಖ್ಯಾತರ ಸಮುದಾಯದವರುಗಳಿಗೆ ಜಾಗೃತಿ ಮೂಡಿಸಲು ರೂಪಿಸಲಾದ ಯೋಜನೆಗಳಾವುವು ; (ವಿವರ ನೀಡುವುದು)

(ಆ) ಸರ್ಕಾರವು ವಿವಿಧ ಸಂಸ್ಥೆ/ಬ್ಯಾಂಕುಗಳಲ್ಲಿ ಅಲ್ಪಸಂಖ್ಯಾತರಿಗೆ ಷೇರು ಸಹಾಯಧನ ಹಾಗೂ ಷೇರು ಮೊತ್ತ ಹೆಚ್ಚಿಸುವ ಕುರಿತು ಕೈಗೊಂಡಿರುವ ಕ್ರಮಗಳೇನು ?

## ರೈತರು ಸಹಕಾರ ಸಂಘಗಳಿಂದ ಪಡೆದ ಸಾಲ ಮನ್ನಾ ಮಾಡುವ ಬಗ್ಗೆ

**ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೭೯೭ (೯೫೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ವಿವಿಧ ಇಲಾಖೆಗಳಿಂದ ರೈತರು ಪಡೆದ ಸಾಲದ ಮೊತ್ತ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರೈತರು ಈ ಸಹಕಾರ ಸಂಘಗಳಿಂದ ಸಾಲ ಪಡೆದು ಬೆಳೆದ ಬೆಳೆಗಳು ಹಾಳಾಗಿದ್ದು ಬೆಳೆಯಿಂದ ತೀವ್ರ ನಷ್ಟವನ್ನು ಅನುಭವಿಸುತ್ತಿರುವುರಿಂದ ರೈತರು ಪಡೆದ ಹಣವನ್ನು ಮನ್ನಾ ಮಾಡಲು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ?

## ಕೆ.ಐ.ಎಡಿ.ಬಿ ಯಲ್ಲಿ ರಿಯಾಯಿತಿ ದರದಲ್ಲಿ ಕೈಗಾರಿಕೆ ನಿವೇಶನ ಹಂಚಿಕೆ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೭೯೮ (೯೫೯) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಐ.ಎ.ಡಿ.ಬಿ., ಮಂಡಳಿಯಲ್ಲಿ ಕೈಗಾರಿಕೆ ಸ್ಥಾಪಿಸಲು ನಿವೇಶನ ಹಂಚಿಕೆಯ ಪ್ರಕ್ರಿಯೆಗಳಾವುವು ; (ವಿವರ ನೀಡುವುದು)

(ಆ) ಸದರಿ ಮಂಡಳಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಉದ್ಯಮಿಗಳಿಗೆ ನೀಡುತ್ತಿರುವ ರಿಯಾಯಿತಿಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಸದರಿ ವರ್ಗಗಳಿಗೆ ಯಾವ ದಿನಾಂಕದಿಂದ ರಿಯಾಯಿತಿಯನ್ನು ನೀಡಲಾಗಿದೆ; ಸದರಿ ರಿಯಾಯಿತಿಯಡಿ ಇಲ್ಲಿಯವರೆಗೂ ಎಷ್ಟು ಕೈಗಾರಿಕಾ ನಿವೇಶನಗಳನ್ನು ಹಂಚಲಾಗಿದೆ ; ಉದ್ಯಮಿ ಹೆಸರು, ಉದ್ಯಮದ ವಿಳಾಸ, ಅದರ ಮೌಲ್ಯ ರಿಯಾಯಿತಿ ನೀಡಿರುವ ಮೊತ್ತ ಮತ್ತು ಬಾಕಿ ಪಾವತಿ ಮಾಡಿರುವ ಮೊತ್ತ ಒಳಗೊಂಡಂತೆ ವರ್ಷವಾರು, ಜಿಲ್ಲಾವಾರು, ವಿವರವಾದ ಮಾಹಿತಿ ನೀಡುವುದು ;

(ಈ) ಈ ರಿಯಾಯಿತಿಗಳನ್ನು ಪ್ರವರ್ಗ ೩ಎ ಮತ್ತು ೩ಬಿ ಉದ್ಯಮಿಗಳಿಗೆ ನೀಡಲಾಗುತ್ತಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಗಣಿಗಾರಿಕೆಯ ಉದ್ಯಮಗಳ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :-**

೭೯೯ (೯೬೦) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಗಣಿ ಮತ್ತು ಗಣಿಗಾರಿಕೆ ಎಂದರೇನು; ಇವುಗಳಲ್ಲಿ ಎಷ್ಟು ವಿಧ ; ಅವು ಯಾವುವು; ರಾಜ್ಯದಲ್ಲಿರುವ ಗಣಿ ಮತ್ತು ಗಣಿಗಾರಿಕೆ ಉದ್ಯಮಗಳು ಯಾವುವು ; (ಮಾಹಿತಿಯನ್ನು ಜಿಲ್ಲಾವಾರು ನೀಡುವುದು)

(ಆ) ಖನಿಜ ಮತ್ತು ಉಪ-ಖನಿಜಗಳು ಎಂದರೇನು; ಅವುಗಳಲ್ಲಿ ಎಷ್ಟು ವಿಧ ಅವು ಯಾವುವು ; ಕರ್ನಾಟಕದಲ್ಲಿ ದೊರೆಯುಬಹುದಾದ ಖನಿಜ-ಉಪ-ಖನಿಜಗಳಾವುವು (ತಾಲ್ಲೂಕುವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಗಣಿ ಭಾದಿತ ಪ್ರದೇಶದ ಪುನಃಶ್ಚೇತನ ನಿಗಮದಡಿ ಇತ್ತಿಚೆಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಷ್ಟು ಹಣ ಖರ್ಚು ಮಾಡಲು ಅನುಮತಿ ನೀಡಿದೆ ; ಇದಕ್ಕೆ ನೇಮಿಸಿರುವ ಸಮಿತಿ ಯಾವುದು ; ಲಭ್ಯವಿರುವ ಅನುದಾನವೆಷ್ಟು; (ವಿವರವಾದ ಮಾಹಿತಿ ನೀಡುವುದು)

(ಈ) ಮಾನ್ಯ ಸರ್ವೋಚ್ಚ ನ್ಯಾಯಾಲಯ ಅನುಮತಿಸಿದ ಅನುದಾನದಲ್ಲಿ ಯಾವ ಯಾವ ಇಲಾಖೆಗಳಿಗೆ ಎಷ್ಟು ಹಣ ಮೀಸಲಿಡಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಸದರಿ ಅನುದಾನದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅತಿಥಿ ಉಪನ್ಯಾಸಕರ ವೇತನಕ್ಕೆ ಬಳಸಲು ಅವಕಾಶವಿದೆಯೇ ? (ವಿವರವಾದ ಮಾಹಿತಿ ನೀಡುವುದು)

## ಸಣ್ಣ, ಅತಿಸಣ್ಣ ಕೈಗಾರಿಕೆಗಳಿಗೆ ಸೌಲಭ್ಯ ಒದಗಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :-**

೮೦೦ (೯೩೪) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ನೋಂದಾಯಿತವಾಗಿರುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಎಷ್ಟು; ರಾಜ್ಯದ ಆದಾಯಕ್ಕೆ ಇವುಗಳ ಕೊಡುಗೆ ಏನು; ಕಾರ್ಯನಿರ್ವಹಿಸುತ್ತಿರುವ/ಅವಲಂಬಿಸಿರುವ ಕಾರ್ಮಿಕರ ಸಂಖ್ಯೆ ಎಷ್ಟು;

(ಆ) ಎಂಎಸ್‌ಎಂಇ ಗಳ ಬ್ಯಾಂಕ್ ಸಾಲದ ಮೇಲೆ ಈ ಹಿಂದೆ ವಿಧಿಸುತ್ತಿದ್ದ ಮುದ್ರಾಂಕ, ಪ್ರಸ್ತುತ ವಿಧಿಸುತ್ತಿರುವ ಮುದ್ರಾಂಕ ಶುಲ್ಕವೆಷ್ಟು; ಸದರಿ ಶುಲ್ಕವನ್ನು ಶೇ.೦.೧ ಅಥವಾ ಗರಿಷ್ಠ ೨೫೦೦೦ ಕ್ಕೆ ಇಳಿಸಲು ಕಾಸಿಯಾ ಸರ್ಕಾರಕ್ಕೆ ಮನವಿ ಮಾಡಿದೆಯೇ ; ಮಾಡಿದ್ದರೆ , ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಇ) ಕೈಗಾರಿಕೆಗಳಿಂದ ಹೊರಬರುವ ಘನತ್ಯಾಜ್ಯ ವಿಲೇವಾರಿಗೆ ವಿಧಿಸುತ್ತಿರುವ ಶುಲ್ಕ ದುಬಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಪೀಣ್ಯಾ ಕೈಗಾರಿಕಾ ವಲಯದಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು, ಇದರ ಸುಧಾರಣೆಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಕೃಷಿ ಭೂಮಿಯಲ್ಲಿನ ಕಲ್ಲುಬಂಡೆ ತೆರವುಗೊಳಿಸುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :-**

೮೦೧ (೯೩೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರು ತಮ್ಮ ಕೃಷಿ ಭೂಮಿಯಲ್ಲಿನ ಕಲ್ಲು ಬಂಡೆಯನ್ನು ತೆರವುಗೊಳಿಸಲು/ಒಡೆಸಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಇರುವ ಮಾರ್ಗಸೂಚಿಗಳು ಯಾವುವು ;

(ಆ) ಯಾವ ಪ್ರಮಾಣದ ಕೃಷಿ ಭೂಮಿಯಲ್ಲಿನ ಬಂಡೆ ತೆರವುಗೊಳಿಸಲು ಅನುಮತಿಯ ಅವಶ್ಯಕತೆಯಿರುವುದಿಲ್ಲ; ಯಾವ ಪ್ರಮಾಣದ ಬಂಡೆಯನ್ನು ತೆರವುಗೊಳಿಸಲು ಅನುಮತಿಯ ಅವಶ್ಯಕತೆಯಿರುತ್ತದೆ; ಇದಕ್ಕೆ ಪಾವತಿಸಬೇಕಾದ ಶುಲ್ಕವೆಷ್ಟು ;

(ಇ) ಹಲವು ರೈತರು ಬಂಡೆಯನ್ನು ತೆರವುಗೊಳಿಸಲು ಅಥವಾ ಸ್ಫೋಟಿಸಲು ಪ್ರಯತ್ನಿಸಿ ಸಾವನ್ನಪ್ಪುತ್ತಿರುವುದು/ ಗಾಯಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ರೈತರಿಂದ ಹಣ ಪಾವತಿಸಿಕೊಂಡು ಸದರಿ ಬಂಡೆಗಳನ್ನು ಸರ್ಕಾರದ ವತಿಯಿಂದಲೇ ತೆರವುಗೊಳಿಸಲು ಅವಕಾಶವಿದೆಯೇ ? (ಆದೇಶದ ಪ್ರತಿಯನ್ನು ನೀಡುವುದು)

## ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ತಡೆಯುವ ಕುರಿತು

**ಡಾ. ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) :-**

೮೦೨ (೯೨೦) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮರಳು ಗಣಿಗಾರಿಕೆಯಿಂದ ಬರುತ್ತಿರುವ ತೆರಿಗೆ ಹಣ ಎಷ್ಟು ;

(ಆ) ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೫ ವರ್ಷಗಳಿಂದ ಅಕ್ರಮ

ಗಣಿಗಾರಿಕೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ತೆರಿಗೆ ನಷ್ಟ ಎಷ್ಟು ; ಅಕ್ರಮ ಗಣಿಗಾರಿಕೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವರ್ಷವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಪ್ರತಿ ಟನ್ ಮರಳಿಗೆ ಸರ್ಕಾರ ಪ್ರಸ್ತುತ ನಿಗದಿಪಡಿಸಿರುವ ದರವೆಷ್ಟು ; ಸರ್ಕಾರ ನಿಗದಿಪಡಿಸಿರುವ ದರಕ್ಕೂ ಗ್ರಾಹಕರಿಗೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಮರಳಿನ ದರಕ್ಕೂ ಬಹಳ ವ್ಯತ್ಯಾಸವಿದ್ದು ; ಇದರಿಂದ ಗ್ರಾಹಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಹಟ್ಟಿ ಪಟ್ಟಣ ಪಂಚಾಯಿತಿಯ ಮೇಲ್ದರ್ಜೆಯ ಬಗ್ಗೆ

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೩ (೯೪೮) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಟ್ಟಿ ಪಟ್ಟಣದಲ್ಲಿ ಬಹುದಿನಗಳಿಂದ ಪಟ್ಟಣ ಪಂಚಾಯಿತಿಯು ಕಾರ್ಯನಿರ್ವಹಿಸುತ್ತಿದ್ದು, ಹಟ್ಟಿ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಟ್ಟಿ ಪಟ್ಟಣ ಪಂಚಾಯಿತಿಯ ಜನತೆಯು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಹಟ್ಟಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಅಥವಾ ನಗರ ಸಭೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ

ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಇದನ್ನು ಮೇಲ್ದರ್ಜೆಗೇರಿಸಲು ಸರ್ಕಾರವು ಚಿಂತಿಸುವುದು? (ವಿವರ ನೀಡುವುದು)

## ಹಟ್ಟಿ ಚಿನ್ನದ ಗಣಿ ಕಂಪನಿಯ ನಿಯಮಿತ ಸ್ಥಳೀಯ ವೃಂದ ಮತ್ತು ಸ್ಥಳೀಯೇತರ ನೇಮಕಾತಿ ಕುರಿತು

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೪ (೯೪೯) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದಲ್ಲಿ ದಿನಾಂಕ: ೧೫.೦೩.೨೦೨೪ ಸಂಖ್ಯೆ ೧೦೧೨೩.೨೪ ಸ್ಥಳೀಯ ವೃಂದ ಮತ್ತು ಸ್ಥಳೀಯೇತರ ವೃಂದ ನೇಮಕಾತಿಗಾಗಿ ಅರ್ಜಿ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ನೇಮಕಾತಿ ಯಾವುದೇ ಪ್ರಕ್ರಿಯೆ ನಡೆಯದಿರಲು ಕಾರಣವೇನು;

(ಇ) ನೇಮಕಾತಿ ಪ್ರಕ್ರಿಯೆ ವಿಳಂಬ ಮಾಡಿ ಅಭ್ಯರ್ಥಿಗಳ ಭವಿಷ್ಯದಲ್ಲಿ ಹಟ್ಟಿ ಚಿನ್ನದ ಗಣಿ ಕಂಪನಿ ಆಟವಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

(ಈ) ನೇಮಕಾತಿ ಪ್ರಕ್ರಿಯೆ ಚಾಲನೆ ನೀಡಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರ ನೀಡುವುದು ಯಾವಾಗ? (ವಿವರ ನೀಡುವುದು)

## ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೦೫ (೯೫೦) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಕಳೆದ ೦೨ ವರ್ಷಗಳಿಂದ ಇಲ್ಲಿಯವರೆಗೂ ಎಷ್ಟು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲಾಗಿದೆ ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಪ್ರಸ್ತುತ ಇರುವ ಸಣ್ಣ ಕೈಗಾರಿಕೆ ಕೇಂದ್ರವೆಷ್ಟು ; ಅವುಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಡಿಸಿಸಿ ಬ್ಯಾಂಕುಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೦೬ (೯೦೦) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಡಿಸಿಸಿ ಬ್ಯಾಂಕುಗಳಲ್ಲಿ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕೋಲಾರ-ಚಿಕ್ಕಬಳ್ಳಾಪುರ ಕೇಂದ್ರ ಸಹಕಾರ ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ಸುಮಾರು ೯.೮೬ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕಳೆದ ೫ ವರ್ಷಗಳ ಅವಧಿಯಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕುಗಳಿಂದ ನೀಡಲಾಗಿರುವ ಸಾಲದ ಮೊತ್ತವೆಷ್ಟು; ಹಾಗೂ ಇದರಲ್ಲಿ ವಸೂಲಿಯಾಗಿರುವ ಹಣವೆಷ್ಟು; ಬಾಕಿ ಬರಬೇಕಾಗಿರುವ ಹಣವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ದೊಡ್ಡ ಮೊತ್ತದ ಹಣ ದುರುಪಯೋಗ ಪಡಿಸಿಕೊಂಡ ಅಧಿಕಾರಿ ಹಾಗೂ ಸಿಬ್ಬಂದಿಗಳಿಂದ ನಷ್ಟದ ಹಣವನ್ನು ಹಿಂಪಡೆಯಲು ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ ?

## ಕೋಲಾರ ನಗರಸಭೆಯಲ್ಲಿ ಸುಮಾರು ೨.೪ ಕೋಟಿ ರೂ ಅವ್ಯವಹಾರವಾಗಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೦೭ (೯೭೪) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ ನಗರಸಭೆಗೆ ಕಳೆದ ಮೂರು ವರ್ಷದಿಂದ ಇಲ್ಲಿಂದುವರೆಗೂ ಸ್ವಚ್ಛ ಭಾರತ ಮಿಷನ್ ೧.೧೦ ಯೋಜನೆಯಡಿಯಲ್ಲಿ ಎಷ್ಟು ಅನುದಾನ ಬಂದಿದೆ ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗೆ ಮತ್ತು ಖರೀದಿಗಳಿಗೆ ಬಳಸಿಕೊಳ್ಳಲಾಗಿದೆ ;

(ಆ) ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಂಬಂಧಿಸಿದಂತೆ ಇ.ವಿ ಚಾರ್ಜಿಂಗ್ ಪಾಯಿಂಟ್, ಸಿ.ಸಿ.ಟಿ.ವಿ ಕ್ಯಾಮೆರಾ ಸೇರಿದಂತೆ ಖರೀದಿಸಿರುವುದರಲ್ಲಿ ಸುಮಾರು ರೂ.೨.೪ ಕೋಟಿಗೂ ಹೆಚ್ಚು ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಇದುವರೆಗೂ ಖರೀದಿ ಮಾಡಲಾಗಿರುವ ಪರಿಕರಗಳು ಯಾವುವು ; ಹಾಗೂ ಖರೀದಿ ಮಾಡುವ ಸಂದರ್ಭದಲ್ಲಿ ಯಾವ ನೀತಿ ನಿಯಮಗಳನ್ನು ಅಳವಡಿಸಿಕೊಳ್ಳಲಾಗಿದೆ ;

(ಈ) ಪರಿಕರಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿತ್ತೆ, ಹಾಗಿದ್ದರೆ, ಟೆಂಡರ್‌ನಲ್ಲಿ ಭಾಗವಹಿಸಿದಂತಹ ಗುತ್ತಿಗೆದಾರರೂ ಯಾರ್ಯಾರು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಕೋಲಾರ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೦೮ (೯೭೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ ತಾಲ್ಲೂಕಿನ ಮಠಪುರ ಮತ್ತು ಸೀತಿ ಗ್ರಾಮದ ಸಮೀಪದ ಬೆಟ್ಟದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ, ಜಲ್ಲಿ ಕ್ರಷರ್ ನಿರ್ಮಾಣದ ಕೆಲಸ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಯಾವ ಕಂಪನಿಯ ಮಾಲೀಕತ್ವದಲ್ಲಿ ನಡೆಯುತ್ತಿದೆ; ಹಾಗೂ ಕೋಲಾರ ಜಿಲ್ಲೆಯಲ್ಲಿ ಅಧಿಕೃತವಾಗಿ ಹಾಗೂ ಅನಧಿಕೃತವಾಗಿ ನಡೆಯುತ್ತಿರುವ ಗಣಿಗಾರಿಕೆ ಪ್ರದೇಶಗಳು ಯಾವುವು ;

(ಇ) ಬಂಡೆಗಳನ್ನು ಸ್ಫೋಟಿಸಲು ಸಿಡಿಮದ್ದು ಉಪಯೋಗಿಸುತ್ತಿರುವುದು ಕಲ್ಲು ಬಂಡೆಗಳು ಸುಮಾರು ಒಂದರಿಂದ ಎರಡು ಕಿ.ಮೀ ವರೆಗೂ ಕಲ್ಲು ಚದುರುತ್ತಿದ್ದು, ಬಹಳಷ್ಟು ಮನೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕೋಲಾರ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯ ಮೇಲೆ ಇದುವರೆಗೂ ಯಾವ ಕ್ರಮ ಕೈಗೊಳ್ಳಾಗಿದೆ, ಹಾಗೂ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡುವ ಸಂದರ್ಭದಲ್ಲಿ, ಸರ್ಕಾರ ಯಾವ ನೀತಿ ನಿಯಮಗಳನ್ನು ವಿಧಿಸುತ್ತದೆ ?

## ಕ್ಷೀರಧಾರೆ ಯೋಜನೆಯಡಿ ನೀಡಲಾಗುತ್ತಿರುವ ಪ್ರೋತ್ಸಾಹಧನದ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೦೯ (೯೨೭) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಒಕ್ಕೂಟಗಳೆಷ್ಟು; ಹಾಲು ಉತ್ಪಾದಕರ ಸಹಕಾರ ಸಂಘಗಳು ಎಷ್ಟಿವೆ ; ಎಷ್ಟು ಜನ ನೋಂದಾಯಿತ ಹಾಲು ಉತ್ಪಾದಕರಿದ್ದಾರೆ ; ದಿನಪ್ರತಿ ಎಷ್ಟು ಎಷ್ಟು ಜನ ರೈತರು ಹಾಲು ಸರಬರಾಜು ಮಾಡುತ್ತಿದ್ದಾರೆ ; ಹಾಲಿನ ಪ್ರೋತ್ಸಾಹಧನವನ್ನು ಪಡೆಯುತ್ತಿರುವ ರೈತರ ಸಂಖ್ಯೆ ಎಷ್ಟಿದೆ ; ಸಾಮಾನ್ಯ ಪರಿಶಿಷ್ಟ ಜಾತಿ/ಪಂಗಡಗಳ ರೈತರ ರೈತರ ಸಂಖ್ಯೆ ಎಷ್ಟಿದೆ ;

(ಆ) ಹೈನುಗಾರಿಕೆ ನಡೆಸುವ ರೈತರಿಗೆ ಅನೂಕೂಲವಾಗುವ ಉದ್ದೇಶದಿಂದ ಕ್ಷೀರಧಾರೆ ಯೋಜನೆಯಡಿ ಪ್ರತಿ ಲೀಟರ್ ಹಾಲಿಗೆ ಎಷ್ಟು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ ; ೨೦೨೩ ಏಪ್ರಿಲ್ ತಿಂಗಳಿನಿಂದ ೨೦೨೪ ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಎಷ್ಟು ಮೊತ್ತವನ್ನು ರೈತರಿಗೆ ಪ್ರೋತ್ಸಾಹಧನದ ಯೋಜನೆಯಡಿ ಪಾವತಿ ಮಾಡಲಾಗಿದೆ ; ಪ್ರೋತ್ಸಾಹಧನವನ್ನು ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು ; ಯಾವ ಸಮಯದಿಂದ

ಬಾಕಿ ಉಳಿಸಿಕೊಳ್ಳಲಾಗಿದೆ ; ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ; ಬಾಕಿ ಪ್ರೋತ್ಸಾಧನ ನೀಡದೆ ಇರುವುದು ಸರ್ಕಾರ ರೈತರಿಗೆ ಮಾಡಿರುವ ಅನ್ಯಾಯವಾಗುವುದಿಲ್ಲವೇ ;

(ಇ) ರೈತರಿಂದ ಸಂಗ್ರಹಿಸಿದ ಹಾಲು ನಂದಿನಿ ಹಾಗೂ ಇತರೆ ಜಿಲ್ಲಾ ಮಟ್ಟದ ಸಹಕಾರಿ ಹಾಲು ಮಾರಾಟ ಮಂಡಳಿ ಮೂಲಕ ಹಾಲು ವಿತರಣೆ ಹಾಗೂ ಮಾರಾಟವಾಗುತ್ತಿದ್ದು, ದಿನಂಪ್ರತಿ ಜನರು ಹಣವನ್ನು ನೀಡಿ ಖರೀದಿಸುತ್ತಿರುವುದರಿಂದ ಹಣ ಸಂಗ್ರಹವು ಅಪಾರವಾಗಿ ಬರುತ್ತಿದ್ದು, ಈ ಹಾಲಿನ ಇತರೆ ಉತ್ಪನ್ನಗಳ ಮಾರಾಟದಿಂದ ಅಪಾರವಾಗಿ ಹಣ ಸಂಗ್ರಹವಾಗುತ್ತದೆ ಹಾಗೂ ಹಾಲಿನ ಖರೀದಿ ದರ ಹಾಗೂ ಮಾರಾಟದ ದರವೂ ಒಂದೇ ಆಗಿರುವುದಿಲ್ಲ, ಮಾರಾಟ ಮಾಡುವಾಗ ಹೆಚ್ಚಿನ ದರದಲ್ಲಿ ಮಾರಾಟವಾಗುತ್ತಿದೆ ; ಹಾಗಾಗಿ ಹಾಲಿನ ಪ್ರೋತ್ಸಾಹಧನವನ್ನು ರೈತರಿಗೆ ನಿಗದಿತ ಸಮಯದಲ್ಲಿ ನೀಡಲು ಸರ್ಕಾರಕ್ಕೆ ಇರುವ ತೊಂದರೆಯೇನು ?

## ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ನಗರ ಪ್ರದೇಶಗಳಲ್ಲಿರುವ ಸ್ಥಳಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೦ (೯೭೨) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ನಗರ ಪ್ರದೇಶಗಳಲ್ಲಿರುವ ಅಧಿಕೃತ ಕೊಳಚೆ ಪ್ರದೇಶಗಳಾವುವು ; (ನಗರವಾರು ಪಟ್ಟಿ ನೀಡುವುದು)

(ಆ) ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ (ಕೊಳಚೆ ನಿರ್ಮೂಲನಾ ಮಂಡಳಿ) ಯಾವ ಯಾವ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದೆ ; (ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ನಗರ ಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕಾಮಗಾರಿಗಳು ಯಾವುವು ; (ವಿವರ ನೀಡುವುದು) ಸದರಿ ಕಾಮಗಾರಿಗಳನ್ನು ಯಾವ ರೀತಿ ಅನುಷ್ಠಾನ ಮಾಡಲಾಗಿದೆ ; (ವಿವರ ನೀಡುವುದು)

(ಈ) ಈ ಕೊಳಚೆ ಪ್ರದೇಶಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವ ಹಂತದಲ್ಲಿವೆ ; ಸದರಿ ಕಾಮಗಾರಿ ನಿರ್ವಹಿಸಿರುವ ಕುರಿತು ಮೂರನೆ ತಂಡದಿಂದ ತಪಾಸಣೆ ಮಾಡಲಾಗಿದೆಯೇ ? (ಫೋಟೊ ಸಹಿತ ವಿವರ ನೀಡುವುದು)

**ಪುರಸಭೆ, ಪಟ್ಟಣ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಕುರಿತು**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೧ (೯೭೩) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಮುನಿಸಿಪಾಲಿಟೀಸ್ ಆಕ್ಟ್ ೧೯೬೪ ರ ಸೆಕ್ಷನ್ ೮೦ಬಿ, ೮೦ಜಿ ಮತ್ತು ೮೦ಎಂ ಕರ್ನಾಟಕದ ಪ್ರತಿ ನಗರ ಪುರಸಭೆ, ಪಟ್ಟಣ ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳ ಪ್ರತಿ ವಾರ್ಡ್‌ಗಳಲ್ಲಿ ಕ್ರಮವಾಗಿ ನೆರೆಹೊರೆ ಗುಂಪುಗಳು, ಪ್ರದೇಶ ಸಭೆಗಳು ಮತ್ತು ವಾರ್ಡ್ ಸಮಿತಿಗಳನ್ನು ಸ್ಥಾಪಿಸಲು ಆದೇಶಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಕರ್ನಾಟಕದ ಪ್ರತಿ ಪುರಸಭೆಯಲ್ಲಿ ಪ್ರತಿ ವಾರ್ಡ್‌ನಲ್ಲಿ ವಾರ್ಡ್ ಸಮಿತಿಗಳು, ಪ್ರದೇಶ ಸಭೆಗಳು ಮತ್ತು ನೆರೆಹೊರೆ ಗುಂಪುಗಳನ್ನು ಸ್ಥಾಪಿಸಲಾಗಿದೆಯೇ ? (ವಿವರಗಳನ್ನು ಒದಗಿಸುವುದು)

## ಬೆಂಗಳೂರಿನ ಹೆಬ್ಬಾಳ ಮತ್ತು ಹೆಬ್ಬಾಳ ಅಮ್ಮಣ್ಣಿಕೆರೆ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೧೨ (೯೯೬) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಹೆಬ್ಬಾಳ ಮತ್ತು ಹೆಬ್ಬಾಳ ಅಮ್ಮಣ್ಣಿಕೆರೆ ಗ್ರಾಮದ ಕೆ.ಐ.ಎ.ಡಿ.ಬಿ. ವಶದಲ್ಲಿರುವ ೫೫ ಎಕರೆ ಪ್ರದೇಶ ಜಾಗವನ್ನು ಬಿ.ಎಂ.ಆರ್.ಸಿ.ಎಲ್ ಕಿತ್ತಳೆ ಮಾರ್ಗವನ್ನು ಹೆಬ್ಬಾಳ ನಿಲ್ದಾಣ ನಿರ್ಮಿಸಲು ಸ್ಥಳ ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಜಾಗವನ್ನು ಬಿ.ಎಂ.ಆರ್.ಸಿ.ಎಲ್ ಗೆ ನೀಡುಲು ಇರುವ ಸಮಸ್ಯೆಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಹೆಬ್ಬಾಳ ಮತ್ತು ಹೆಬ್ಬಾಳ ಅಮ್ಮಣ್ಣಿಕೆರೆ ಗ್ರಾಮದ ಕೆ.ಐ.ಎ.ಡಿ.ಬಿ ವಶದಲ್ಲಿರುವ ೫೫ ಎಕರೆ ಪ್ರದೇಶ ಜಾಗಕ್ಕೆ ಕೆ.ಐ.ಎ.ಡಿ.ಬಿ. ರವರಿಂದ ನೀಡಿದ ಪರಿಹಾರ ಧನ ಎಷ್ಟು ; ಎಷ್ಟು ಎಕರೆಗೆ ಪರಿಹಾರ ನೀಡಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಬೈಕಂಪಾಡಿ APMC ಮಾರುಕಟ್ಟೆ ಕಟ್ಟಡದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೧೩ (೯೪೪) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೈಕಂಪಾಡಿ APMC ಮಾರುಕಟ್ಟೆ ಕಟ್ಟಡ ಮತ್ತು ಗೋಡಾನ್‌ಗಳನ್ನು ಕಟ್ಟಲಾಗಿದ್ದು, ಇದು ಕಾರ್ಯನಿರ್ವಹಿಸದೇ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೈಕಂಪಾಡಿ APMC ಮಾರುಕಟ್ಟೆಯ ವ್ಯಾಪಾರಸ್ಥರು ವ್ಯವಹಾರ ನಡೆಸದೇ ಇಲಾಖೆಯ ಅಧಿಕಾರಿಗಳೊಂದಿಗೆ ಸೇರಿಕೊಂಡು ಮಾರುಕಟ್ಟೆಯ ಶುಲ್ಕ ಕಟ್ಟದಿರುವುದು ನಿಜವೇ ; ಇಲಾಖೆ ಕ್ರಮ ಕೈಗೊಂಡಿದೆಯೇ ; (ವಿವರ ನೀಡುವುದು)

(ಇ) ಬೈಕಂಪಾಡಿ APMC ಯಲ್ಲಿ ನಿರ್ಮಾಣ ಮಾಡಿದ ಗೋಡಾನ್‌ಗಳ ಸಂಖ್ಯೆ ಎಷ್ಟು, ಖಾಲಿ ಇರುವ ಗೋಡಾನ್‌ಗಳು ಎಷ್ಟು ; (ವಿವರ ನೀಡುವುದು)

(ಈ) ರೈತರು ಬೆಳೆದ ವಸ್ತುಗಳನ್ನು APMC ಮಾರುಕಟ್ಟೆಗೆ ತರದೇ ಬೇರೆ ಕಡೆ ವ್ಯಾಪಾರ ನಡೆಸುತ್ತಿರುವ ವ್ಯಾಪಾರಸ್ಥರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಉ) ಅಡಿಕೆ ವ್ಯಾಪಾರ ಮಾಡುತ್ತಿರುವ ವ್ಯಾಪಾರಸ್ಥರಿಗೆ ಯಾವ ನಿಯಮ ಅನ್ವಯಿಸುತ್ತದೆ ? (ವಿವರ ನೀಡುವುದು)

## ೨೦೨೩-೨೪ನೇ ಸಾಲಿನಲ್ಲಿ ಗ್ರಾಮ ಪಂಚಾಯತ್, ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿಗಳ ಕುರಿತು

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೪ (೯೪೫) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೩-೨೪ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳನ್ನು ನಗರಸಭೆ, ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ; (ವಿವರ ನೀಡುವುದು)

(ಆ) ಮೇಲ್ದರ್ಜೆಗೇರಿಸಿದ ಸ್ಥಳೀಯ ಸಂಸ್ಥೆಗಳಿಗೆ ಕಳೆದ ೦೫ ವರ್ಷ ಕಳೆದರೂ ಚುನಾವಣೆ ನಡೆಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಕೈಗೊಂಡಿರುವ ಕ್ರಮವೇನು ;

(ಇ) ಉಡುಪಿ ಜಿಲ್ಲೆಯ, ಕಾಪು ತಾಲ್ಲೂಕಿನ ಶಿರ್ವ ಗ್ರಾಮ ಪಂಚಾಯತ್ ಅನ್ನು ಮೇಲ್ದರ್ಜೆಗೇರಿಸಲು ಎಲ್ಲಾ ಅರ್ಹತೆ ಇದ್ದರೂ ಈವರೆಗೆ ಮೇಲ್ದರ್ಜೆಗೇರಿಸದೇ ಇರಲು ಕಾರಣವೇನು ; ಇಲಾಖೆಗೆ ಇರುವ ತೊಂದರೆಗಳೇನು ? (ವಿವರ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸೈಟ್ ಹಂಚಿಕೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೫ (೯೪೬) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸೈಟ್ ಹಂಚಿಕೆ ಮತ್ತು ಪರವಾನಿಗೆ ನೀಡುವಲ್ಲಿ ವ್ಯಾಪಕ ಭ್ರಷ್ಟಾಚಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಎಷ್ಟು ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಕೇಸುಗಳು ದಾಖಲು ಆಗಿವೆ ; ಎಷ್ಟು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ; ಕೈಗೊಂಡ ಕ್ರಮಗಳ ಬಗ್ಗೆ ; ವಿವರ ನೀಡುವುದು

(ಆ) ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ CA ಸೈಟ್‌ಗಳನ್ನು ಹಂಚುವಾಗ ಯಾವ ನಿಯಮಗಳನ್ನು ಅನುಸರಿಸಲಾಗುತ್ತದೆ ; (ವಿವರ

ನೀಡುವುದು) ಲೇಔಟ್‌ಗಳಿಗೆ ಪರವಾನಿಗೆ ನೀಡುವಾಗ ನೀಡಬೇಕಾದ ಸೈಟ್‌ಗಳನ್ನು ನೀಡದಿರುವುದು ನಿಜವೇ ; (ವಿವರ ನೀಡುವುದು)

(ಇ) ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಧಿಕಾರಿಗಳ ಕೊರತೆಯಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಗಳು ಉಂಟಾಗಿದ್ದು, ಈ ಬಗ್ಗೆ ಕೈಗೊಂಡ ಕ್ರಮವೇನು ; ಎಷ್ಟು ಹುದ್ದೆಗಳು ಬಾಕಿ ಇವೆ ; (ವಿವರ ನೀಡುವುದು)

(ಈ) ನಗರಾಭಿವೃದ್ಧಿ ಇಲಾಖೆಯಲ್ಲಿ ಏಜೆಂಟರ್‌ಗಳ ಸಂಖ್ಯೆ ತುಂಬಾ ಜಾಸ್ತಿಯಾಗಿದ್ದು, ಇವರು ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಕೈಗೊಂಡಿರುವ ಕ್ರಮವೇನು ? (ವಿವರ ನೀಡುವುದು)

## ಮಂಗಳೂರು ನಗರಾಭಿವೃದ್ಧಿ ವ್ಯಾಪ್ತಿಯಲ್ಲಿ ಲೇಔಟ್ ಸ್ಥಾಪಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೬ (೯೪೨) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ನಗರಾಭಿವೃದ್ಧಿ ವ್ಯಾಪ್ತಿಯ **ಆಶಾ ಸಿಟಿ ಬಿಲ್ಡರ್ ಡೆವಲಪರ್** ಕೊಳಾಯಿ ಗ್ರಾಮ, ಚಿತ್ರಪುರದಲ್ಲಿ ನಿರ್ಮಿಸಿದ ಲೇಔಟ್‌ನ ಅಭಿವೃದ್ಧಿ ನಕ್ಷೆಯನ್ನು ಎಷ್ಟು ಭಾರಿ ಬದಲಾಯಿಸಲಾಗಿದೆ ; (ವಿವರ ನೀಡುವುದು)

(ಆ) ಸದರಿ ಲೇಔಟ್ ನಕ್ಷೆ ಬದಲಾವಣೆಯಿಂದ "ಗೆಜೆಟ್ ಕಮ್ಯೂನಿಟಿ"ಗೆ ನೀಡುವ ೦೩ ಎಕರೆ ಜಮೀನು CA ಸೈಟ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ೦೩ ಎಕರೆ ಸ್ಥಳಕ್ಕೆ ನಕ್ಷೆ ಬದಲಾವಣೆಯಿಂದಾಗಿ CA ಸೈಟ್ ನಿವೇಶನಕ್ಕಾಗಿ ಸರ್ಕಾರಕ್ಕೆ ನೀಡಬೇಕಾದ ಸ್ಥಳ ನಷ್ಟವಾಗದಂತೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ ;

(ಈ) ನಕ್ಷೆ ಬದಲಾವಣೆಗೆ ನಗರ ಯೋಜನೆ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆಯೇ ? (ವಿವರ ನೀಡುವುದು)

## ಅಡಿಕೆ ಬೆಳೆ ಉತ್ತೇಜನದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೭ (೯೪೩) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಡಿಕೆ ಬೆಳೆ ಉತ್ತೇಜನ ಮತ್ತು ಮಾರುಕಟ್ಟೆಯನ್ನು ಒದಗಿಸಲು ಅಡಿಕೆ ಬೆಳೆಗಾರರ ನಿಗಮ ಸ್ಥಾಪಿಸಬೇಕೆಂಬ ಬೇಡಿಕೆ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ ; (ವಿವರ ನೀಡುವುದು)

(ಆ) ಅಡಿಕೆ ಬೆಳೆಗಾರರು ಹವಾಮಾನ ವೈಪರೀತ್ಯದಿಂದ ಕೊಳೆ ರೋಗಕ್ಕೆ ತುತ್ತಾದಾಗ ಅದಕ್ಕೆ ಸಹಾಯಕ್ಕೆ ಬರಲು ಅವರ್ತ ನಿಧಿಯೊಂದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದೇ ;

(ಇ) ತೋಟಗಾರಿಕಾ ಇಲಾಖೆಯಿಂದ ಅಡಿಕೆ ಬೆಳೆಗಾರರಿಗೆ ಉತ್ತೇಜನ ನೀಡಲು ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಈ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಳನ್ನು ಬೆಳೆಸಲಾಗುತ್ತದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಅಡಿಕೆ ಬಳಕೆಯಿಂದ ಕ್ಯಾನ್ಸರ್ ರೋಗ ಬರುತ್ತದೆ ಎಂದು WHO ನೀಡಿರುವ ಹೇಳಿಕೆಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವೇನು ? (ವಿವರ ನೀಡುವುದು)

## ಸಿ.ಎಸ್.ಆರ್ ನಿಧಿಯಿಂದ ಅಭಿವೃದ್ಧಿ ಕಾಮಾಗಾರಿಗಳ ಬಗ್ಗೆ

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೧೮ (೮೯೧) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಿ.ಎಸ್.ಆರ್ (ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ) ಯೋಜನೆಯಡಿ ರಾಜ್ಯದಲ್ಲಿರುವ ಸರ್ಕಾರಿ ಕಾರ್ಪೊರೇಟ್ ಕಂಪನಿಗಳು, ನಿಗಮಗಳು ಮಂಡಳಿಗಳು, ಅಭಿವೃದ್ಧಿ ಪ್ರಾಧಿಕಾರಗಳು, ಹಾಗೂ ಖಾಸಗಿ ಕಾರ್ಪೊರೇಟ್ ಕಂಪನಿಗಳು ಶೇಕಡಾವಾರು ಎಷ್ಟು ಪ್ರಮಾಣದಲ್ಲಿ ಸಿ.ಎಸ್.ಆರ್.ನಿಧಿಯನ್ನು ಕೊಡಲು ಅವಕಾಶವಿದೆ ; (ಸಂಪೂರ್ಣ ಮಾಹಿತಿಯೊಂದಿಗೆ ಆದೇಶ/ ಸುತ್ತೋಲೆಗಳನ್ನು ಒದಗಿಸುವುದರೊಂದಿಗೆ ವಿವರಣೆ ನೀಡುವುದು)

(ಆ) ಕಳೆದ 3 ವರ್ಷಗಳಲ್ಲಿ ಸಿ.ಎಸ್.ಆರ್ (ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ) ಯೋಜನೆಯಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಂಡು ಅಭಿವೃದ್ಧಿ ಅಥವಾ ಪುನಶ್ಚೇತನಗೊಳಿಸಲಾಗಿದೆ ; (ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು)

(ಇ) ಬೆಂಗಳೂರು ನಗರ ಜಿಲ್ಲೆ ಸೇರಿದಂತೆ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸರ್ಕಾರಿ ಶಾಲಾ ಕಾಲೇಜುಗಳ ಕಟ್ಟಡ, ಅಂಗನವಾಡಿ ಕಟ್ಟಡಗಳು, ಬೆಂಗಳೂರು ನಗರದಲ್ಲಿರುವ ಕೆರೆಗಳ ದುರಸ್ಥಿ ಮತ್ತು ಪುನಶ್ಚೇತನ ಕಾಮಗಾರಿಗಳನ್ನು ಕೈಗೊಳ್ಳಲು ಈ ಸಿ.ಎಸ್.ಆರ್ ನಿಧಿಯ ಅನುದಾನವನ್ನು ಏಕೆ ಬಳಕೆ ಮಾಡಿಕೊಂಡಿರುವುದಿಲ್ಲ ; (ವಿವರ ನೀಡುವುದು)

(ಈ) ಸಿ.ಎಸ್.ಆರ್ ಯೋಜನೆಯಡಿ ರಾಜ್ಯದಲ್ಲಿರುವ ಸರ್ಕಾರಿ ಕಾರ್ಪೊರೇಟ್ ಕಂಪನಿಗಳು, ನಿಗಮಗಳು ಮಂಡಳಿಗಳು, ಅಭಿವೃದ್ಧಿ ಪ್ರಾಧಿಕಾರಗಳು, ಹಾಗೂ ಖಾಸಗಿ ಕಾರ್ಪೊರೇಟ್ ಕಂಪನಿಗಳು ಇಂತಿಷ್ಟು ಪ್ರಮಾಣದಲ್ಲಿ ಶೇಕಡಾವರು ಇಂತಹ ಕಾಮಗಾರಿಗಳಿಗೆ ಅನುದಾನವನ್ನು ನೀಡುವಂತೆ ಕಟ್ಟು ನಿಟ್ಟಿನ ಆದೇಶ ಹೊರಡಿಸಲಾಗುವುದೇ ? (ವಿವರ ನೀಡುವುದು)

## ನಗರಸಭೆ ಪುರಸಭೆ ಪಟ್ಟಣ ಪಂಚಾಯಿತಿಗಳಿಗೆ ಅನುದಾನ ನೀಡಿರುವ ಕುರಿತು

**ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೯೯ (೮೯೨) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೪-೨೫ನೇ ಸಾಲಿಗೆ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಬೇಕಾಗಿದ್ದ ಒಟ್ಟು ಅನುದಾನವೆಷ್ಟು ಹಾಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಜಿಲ್ಲಾವಾರು ಪುರಸಭೆ, ಪಟ್ಟಣ ಪಂಚಾಯಿತಿಗಳ ಮಾಹಿತಿ ನೀಡುವುದು)

(ಆ) ಈ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ; ಈ ಆರ್ಥಿಕ ವರ್ಷದ ಕೊನೆಯಲ್ಲಿ ಅನುದಾನ ನೀಡಿದ್ದಲ್ಲಿ ಟೆಂಡರ್ ಇನ್ನಿತರೆ ಪ್ರಕ್ರಿಯೆಗಳನ್ನು ನಿರ್ವಹಿಸಲು ಹಾಗೂ ಗುಣ ಮಟ್ಟದ ಕಾಮಗಾರಿಗಳನ್ನು ಮಾಡಲು ಸಾಧ್ಯವೇ ; ಸರ್ಕಾರ ಸ್ಪಷ್ಟ ಉತ್ತರ ನೀಡುವುದು ; (ವಿವರ ನೀಡುವುದು)

(ಇ) ಸರ್ಕಾರದ ಸಮಯಕ್ಕೆ ಅನುದಾನ ನೀಡದಿರಲು ಕಾರಣವೇನು: ಅನುದಾನದ ಕೊರತೆ ಇದೆಯೇ ; (ವಿವರ ನೀಡುವುದು)

(ಈ) ೨೦೨೪-೨೫ನೇ ಸಾಲಿಗೆ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳಿಗಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಮಾಹಿತಿ ಒದಗಿಸುವುದು)

## ಸಕ್ಕರೆ ಕಾರ್ಖಾನೆಗಳಿಂದ ಸಂಗ್ರಹವಾದ ರಸ್ತೆ ಕರ ನಿಧಿಯಿಂದ ಅಭಿವೃದ್ಧಿ ಕೈಗೊಂಡಿರುವ ಬಗ್ಗೆ

**ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ) :-**

೮೨೦ (೯೬೩) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಯಾವುವು ;

(ಆ) ಈ ಸಕ್ಕರೆ ಕಾರ್ಖಾನೆಗಳು ಖರೀದಿಸಿದ ಪ್ರತಿ ಮೆ ಟನ್ ಕಬ್ಬಿಗೆ ಸಂಗ್ರಹಿಸಿರುವ ರಸ್ತೆ ಕರ ಎಷ್ಟು ; ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಿರುವ ರಸ್ತೆ ಕರದ ಒಟ್ಟು ಮೊತ್ತ ಎಷ್ಟು ; (ವರ್ಷವಾರು, ಕಾರ್ಖಾನೆವಾರು ಮಾಹಿತಿ ನೀಡುವುದು)

(ಇ) ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿಗೆ ರಸ್ತೆ ಕರ ನಿಧಿಯಿಂದ ಹಂಚಿಕೆ ಮಾಡಿರುವ ಅನುದಾನ ಎಷ್ಟು ; (ಜಿಲ್ಲಾವಾರು ಮತ್ತು ಕಾರ್ಖಾನೆವಾರು ಕಳೆದ ೩ ವರ್ಷಗಳ ಮಾಹಿತಿ ನೀಡುವುದು)

(ಈ) ಈ ರೀತಿ ಸಂಗ್ರಹವಾದ ರಸ್ತೆ ಕರ ನಿಧಿಯಿಂದ ಆಯಾ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಕೈಗೊಂಡ ರಸ್ತೆ ದುರಸ್ತಿ, ಅಭಿವೃದ್ಧಿ ಮತ್ತು ಉನ್ನತೀಕರಣದ ಕಾಮಗಾರಿಗಳು ಯಾವುವು ; ಹಾಗೂ ಆ ಕಾಮಗಾರಿಗಳಿಗೆ ಭರಿಸಲಾಗಿರುವ ವೆಚ್ಚ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಉ) ರಸ್ತೆ ಕರ ನಿಧಿಯಿಂದ ಜಿಲ್ಲಾವಾರು ಅನುದಾನ ಹಂಚಿಕೆ ಮಾಡದಿದ್ದರೆ ಕಾರಣಗಳೇನು ; (ವಿವರ ನೀಡುವುದು)

(ಊ) ರಸ್ತೆ ಕರ ನಿಧಿಯಿಂದ ಕೈಗೆತ್ತಿಕೊಳ್ಳಲಾಗುವ ರಸ್ತೆ ಕಾಮಗಾರಿಗಳ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ನಿರ್ವಹಣೆಗೆ ಅನುಕೂಲವಾಗುವಂತೆ ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆಯೇ: ಕಳೆದ ಮೂರು ವರ್ಷಗಳಲ್ಲಿ ಈ ಸಮಿತಿ ಎಷ್ಟು ಬಾರಿ ಸಭೆಗಳನ್ನು ನಡೆಸಿದೆ ? (ಸಭೆ ನಡೆದ ದಿನಾಂಕಗಳ ಮಾಹಿತಿಯನ್ನು ವರ್ಷವಾರು ನೀಡುವುದು)

## ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಭೂಸ್ವಾಧೀನ ಕುರಿತು

**ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) :-**

೮೨೧ (೯೬೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ (ಕೆಐಎಡಿಬಿ) ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಎಲ್ಲೆಲ್ಲಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ ; (ತಾಲ್ಲೂಕು, ಗ್ರಾಮಗಳ ಹೆಸರು, ವಿಸ್ತೀರ್ಣ ಸೇರಿದಂತೆ ಸಂಪೂರ್ಣ ವಿವರ ನೀಡುವುದು)

(ಆ) ಪ್ರಸ್ತಾವಿತ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದೆಯೇ ;

(ಇ) ಇಲ್ಲದಿದ್ದಲ್ಲಿ, ಕಾರಣಗಳೇನು ; ಅಳತೆ ಕಾರ್ಯ ಪೂರ್ಣಗೊಂಡಿರುವ, ಪರಿಹಾರ ಪಾವತಿಸಿರುವ ಅಥವಾ ಪಾವತಿಸಲು ಬಾಕಿ ಇರುವ ಮೊತ್ತ ಹಾಗೂ ಸರ್ಕಾರದ ಹಂತದಲ್ಲಿ ಅನುಮೋದನೆಗೆ ಬಾಕಿ ಪ್ರದೇಶಗಳಾವುವು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿಯಿಂದಾಗಿ ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ನೀಡುವ ಪರಿಹಾರವೇನು ;

(ಉ) ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ ನಂತರ ಸ್ಥಾಪನೆಗೊಳ್ಳುವ ಕೈಗಾರಿಕಾ ಘಟಕಗಳಿಂದ ಎಷ್ಟು ಜನರಿಗೆ ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ ? (ವಿವರ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಗಳ ಕುರಿತು

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೨ (೧೦೦೧) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಮಹಾಯೋಜನೆಯನ್ನು ಪರಿಷ್ಕರಿಸಲು ಯೋಚಿಸಿದೆಯೇ ; ಯಾವ ಯಾವ ನಗರಗಳಲ್ಲಿ ಮಹಾಯೋಜನೆ ಪರಿಷ್ಕರಣೆ ಪೂರ್ಣಗೊಂಡಿದೆ ;

(ಆ) ರಾಜ್ಯದ ವಿವಿಧ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಾರ್ವಜನಿಕರಿಂದ ಹಾಗೂ ಇತರ ವಸತಿ ಬಡಾವಣೆ ಅಭಿವೃದ್ಧಿದಾರರಿಂದ ಬಡಾವಣೆ ಅನುಮೋದನೆಗೆ ಹಾಗೂ ಇತರ ಕಾರಣಗಳಿಗಾಗಿ ಅಭಿವೃದ್ಧಿ ಹಾಗೂ ಇತರ ಶುಲ್ಕವನ್ನು ಸ್ವೀಕರಿಸಲಾಗುತ್ತದೆಯೇ ; ಶುಲ್ಕ ವಿಧಿಸುವ ಮತ್ತು ವೆಚ್ಚ ಮಾಡಲು ಇರುವ ನಿಯಮಗಳಾವುವು ;

(ಇ) ಕಳೆದ ಮೂರು ವರ್ಷಗಳಲ್ಲಿ ಮಂಗಳೂರು (MUDA) ಹಾಗೂ ಶಿವಮೊಗ್ಗ (SUDA) ನಗರಾಭಿವೃದ್ಧಿ ಪ್ರಾಧಿಕಾರಗಳು ವಿವಿಧ ಠೇವಣಿ, ತೆರಿಗೆ, ಕೆರೆ ಅಭಿವೃದ್ಧಿ ಶುಲ್ಕ, ಇತ್ಯಾದಿಗಳ ರೀತಿಯಲ್ಲಿ ಸಂಗ್ರಹಿಸಿದ ಒಟ್ಟು ಮೊತ್ತ ಎಷ್ಟು ; ಇವುಗಳನ್ನು ಯಾವ ಯಾವ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತಿದೆ ; ಯಾವ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ; ಈ ಮೊತ್ತ ವೆಚ್ಚ ಮಾಡುವ ಬಗ್ಗೆ ಯಾವ ಕಾಮಗಾರಿಗಳಿಗೆ ಅನುದಾನ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ ?

## ಮೂಲಸೌಲಭ್ಯ ಅಭಿವೃದ್ಧಿ ಕುರಿತು

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೨೩ (೧೦೦೨) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಕ್ಕಾಗಿ ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸುವ ವಲಯಗಳಲ್ಲಿ ಮೂಲ ಸೌಲಭ್ಯದಲ್ಲಿ ಹೆಚ್ಚಿನ ಖಾಸಗಿ ಬಂಡವಾಳವನ್ನು ಉತ್ತೇಜಿಸಲು ಏನು ಕ್ರಮವಹಿಸಲಾಗುತ್ತಿದೆ ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವೈಮಾನಿಕ, ರೈಲು ಮತ್ತು ಕಡಲ ಸಂಪರ್ಕವನ್ನು ಅಭಿವೃದ್ಧಿಪಡಿಸುವ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರ ನಡುವೆ ಸಮನ್ವಯ ಸಾಧಿಸಲು ಈವರೆಗೆ ಯಾವ ಕ್ರಮವಹಿಸಲಾಗಿದೆ ;

(ಇ) ಮೂಲಸೌಲಭ್ಯ ಯೋಜನೆಗಳ ಪರಿಷ್ಕೃತ ಪಿಪಿಪಿ ನೀತಿ, ೨೦೧೮ರಂತೆ ಪಿಪಿಪಿ ಕೋಶವು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಯೋಜನೆಗಳಿಗೆ ಸಂಬಂಧಿಸಿದಂತೆ ಎಷ್ಟು ಪ್ರಸ್ತಾವನೆಗಳನ್ನು ಏಕ ಗವಾಕ್ಷಿ ಸಮಿತಿ ಮುಂದೆ ಮಂಡಿಸಿದೆ ; ಅವುಗಳ ಪ್ರಗತಿ ಏನು ;

(ಈ) ಕರ್ನಾಟಕ ರೈಲ್ವೆ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ (ಕೆ-ರೈಡ್) ಮೂಲಕ ರೈಲ್ವೆ ಸಚಿವಾಲಯದ ಪಾಲುದಾರಿಕೆಯೊಂದಿಗೆ ಕರಾವಳಿ ಭಾಗದ ಜನವಸತಿ ಪ್ರದೇಶದಲ್ಲಿ ರೈಲ್ವೆ ಲೆವೆಲ್ ಕ್ರಾಸಿಂಗ್, ಮೇಲ್ಸೇತುವೆ, ಕೆಳಸೇತುವೆ, ಸರಕು ಶೆಡ್, ರೈಲ್ವೆ ನಿಲ್ದಾಣಗಳ ಅಭಿವೃದ್ಧಿ ಇತ್ಯಾಧಿಗಳ ಕುರಿತಂತೆ ಏನು ಕ್ರಮವಹಿಸುತ್ತಿದೆ ?

## ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೂಲ ಸೌಲಭ್ಯ ಒದಗಿಸುವ ಕುರಿತು

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೪ (೧೦೦೩) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಪೌರಾಡಳಿತಗಳ ಅಧೀನದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತರಕಾರಿ ಹೂ ಹಾಗೂ ಮೀನು ಮಾರುಕಟ್ಟೆಗಳು,

ವಾಣಿಜ್ಯ ಸಂಕೀರ್ಣಗಳು, ಬಸ್ಸು ನಿಲ್ದಾಣಗಳು, ಸಾರ್ವಜನಿಕ ಶೌಚಾಲಯಗಳು, ಆಟೋ ಹಾಗೂ ಇತರ ವಾಹನ ನಿಲ್ದಾಣಗಳು, ಸಾರ್ವಜನಿಕ ವಾಹನಗಳ ನಿಲ್ದಾಣಗಳು ಇತ್ಯಾದಿ ಮೂಲಸೌಲಭ್ಯಗಳ ಅಭಿವೃದ್ಧಿಗೆ ಏನು ಕ್ರಮವಹಿಸಲಾಗಿದೆ ;

(ಆ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮೀನು ಮತ್ತು ಮಾಂಸ ಮಾರುಕಟ್ಟೆಗಳನ್ನು ಸಮರ್ಪಕವಾಗಿ ನಿರ್ವಹಿಸಲು ಯಾವಾಗ ಕ್ರಮವಹಿಸಲಾಗುತ್ತಿದೆ ;

(ಇ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಎಲ್ಲಾ ಮೂಲಸೌಲಭ್ಯಗಳ ಅಭಿವೃದ್ಧಿಗೆ ಯಾವುದಾದರೂ ಸಮಗ್ರ ಯೋಜನೆ ರೂಪಿಸಲಾಗಿದೆಯೇ ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಪೌರಾಡಳಿತ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮಳೆಗಾಲದ ಅವಧಿಯಲ್ಲಿ ಮರಗಳು ರಸ್ತೆಗೆ ಬಿದ್ದು ಅವಘಡಗಳು ಸಂಭವಿಸಿರುವ ಹಿನ್ನಲೆಯಲ್ಲಿ ರಸ್ತೆ ಬದಿಯಲ್ಲಿ ಇರುವ ಅಪಾಯಕಾರಿ ಮರ ಕಟ್ಟಡ ಇತ್ಯಾದಿಗಳನ್ನು ತೆರವು ಮಾಡಲು ಕ್ರಮವಹಿಸಲಾಗಿದೆಯೇ ?

## ಸಹಕಾರಿ ಸಂಘಗಳ ಮೂಲಕ ಸಾಲ ವಿತರಣೆ ಕುರಿತು

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೫ (೧೦೦೪) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೃಷಿಕರಿಗೆ ನೆರವಾಗುವ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಶೂನ್ಯ ಬಡ್ಡಿದರದಲ್ಲಿ ಮತ್ತು ಕನಿಷ್ಟ

ಬಡ್ಡಿದರದಲ್ಲಿ ಬೆಳೆ ಸಾಲ ನೀಡುವ ಕುರಿತು ಇಲಾಖೆ ಯಾವ ನಿಯಮಗಳನ್ನು ರಚಿಸಿದೆ ; ಅವುಗಳನ್ನು ಅನುಷ್ಠಾನಕ್ಕೆ ತರಲಾಗಿದೆಯೇ ;

(ಆ) ೨೦೨೪-೨೫ನೇ ಸಾಲಿನಲ್ಲಿ ಕೃಷಿಕರಿಗೆ ಶೂನ್ಯ ಬಡ್ಡಿದರದಲ್ಲಿ ೫.೦೦ ಲಕ್ಷ ರೂಪಾಯಿವರೆಗೆ ಮತ್ತು ಶೇಕಡಾ ೩.೦೦ರ ಬಡ್ಡಿದರದಲ್ಲಿ ೧೫.೦೦ ಲಕ್ಷ ರೂಪಾಯಿಗಳವರೆಗೆ ಕೃಷಿ ಹಾಗೂ ಕೃಷಿ ಸಂಬಂಧಿತ ಸಾಲ ನೀಡುವ ಕುರಿತು ಇಲಾಖೆ ಹೊರಡಿಸಿದ ದಿನಾಂಕ: ೦೧.೦೮.೨೦೨೪ರ ಸುತ್ತೋಲೆಯಂತೆ ಎಷ್ಟು ಜಿಲ್ಲೆಗಳಲ್ಲಿ ಎಷ್ಟು ಮೊತ್ತದ ಸಾಲ ವಿತರಿಸಿದೆ ಮತ್ತು ಎಷ್ಟು ಸಂಖ್ಯೆಯ ಸಾಲಗಳ ಪ್ರಸ್ತಾವನೆಗಳು ಪ್ರಕ್ರಿಯೆಯಲ್ಲಿದೆ ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಎಷ್ಟು ಜನ ಕೃಷಿಕರಿಗೆ ಎಷ್ಟು ಮೊತ್ತದ ಬೆಳೆ ಮತ್ತು ಕೃಷಿ ಸಂಬಂಧಿತ ಸಾಲ ನೀಡಲಾಗಿದೆ ಮತ್ತು ಸಾಲಗಳ ಪ್ರಸ್ತಾವನೆಗಳು ಪ್ರಸ್ತುತ ಪ್ರಕ್ರಿಯೆಯಲ್ಲಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ನಗರ ಯೋಜನೆ ಕುರಿತು

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೬ (೧೦೦೫) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದಿರುವ ಪ್ರದೇಶದಲ್ಲಿ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಗೆ ಅನುಸರಿಸುತ್ತಿರುವ ನಿಯಮಗಳೇನು ;

(ಆ) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಡದೇ ಇರುವ ಪ್ರದೇಶದಲ್ಲಿ ಮಹಾಯೋಜನೆ ಅಲಭ್ಯತೆಯ ಹಿನ್ನಲೆಯಲ್ಲಿ ಸದರಿ ಸ್ಥಳಗಳಿಗೆ ಅನ್ವಯಿಸುವ ವಿವಿಧ ಇಲಾಖೆಗಳ ಹಲವು ಸುತ್ತೋಲೆ ಮೂಲಕ ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಯಲ್ಲಿ ಆಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲು ಯಾವಾಗ ಕ್ರಮವಹಿಸಲಾಗುವುದು ;

(ಇ) ಏಕ ಹಾಗೂ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆಗೆ ರಸ್ತೆ ಅಗಲೀಕರಣ, ಸಾರ್ವಜನಿಕ ರಸ್ತೆ, ಮತ್ತು ರಸ್ತೆ ಜಾಗಗಳ ಹಸ್ತಾಂತರದ ಬಗ್ಗೆ ವಿವಿಧ ಇಲಾಖೆಗಳ ಸುತ್ತೋಲೆಗಳಲ್ಲಿರುವ ವೈರುಧ್ಯಗಳನ್ನು ಸರಿಪಡಿಸಲು ಯಾವ ರೀತಿ ಕ್ರಮವಹಿಸಲಾಗುತ್ತಿದೆ ;

(ಈ) ಕೇಂದ್ರ ಕಛೇರಿಯ DTCP-1-CIRC-೨೦೨೨-೨೩/೪೨೦, ದಿನಾಂಕ: ೧೯.೦೫.೨೦೨೨ರ ಸುತ್ತೋಲೆಯನ್ನು ಹಿಂಪಡೆದ ಕಾರಣ ೨.೦೦ ಎಕರೆಗಿಂತ ಹೆಚ್ಚಿನ ವಿಸ್ತೀರ್ಣದ ಬಡಾವಣೆ ನಕ್ಷೆ ಅನುಮೋದನೆಗೆ ಕಡತಗಳು ಜಂಟಿ ನಿರ್ದೇಶಕರ ಕಚೇರಿ ಮೈಸೂರಿಗೆ ಹೋಗಬೇಕಾದ ಅನಿವಾರ್ಯ ಸೃಷ್ಟಿಯಾಗಿದ್ದು, ಇದನ್ನು ಸರಿಪಡಿಸಲು ಸರ್ಕಾರ ಚಿಂತಿಸಿದೆಯೇ ?

## ಮೈಸೂರು ಅಭಿವೃದ್ಧಿ ಪ್ರಾಧಿಕಾರವು ೫೦:೫೦ ಅನುಪಾತದಡಿ ಹಂಚಿಕೆ ಮಾಡಿರುವ ನಿವೇಶನಗಳ ಬಗ್ಗೆ

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೭ (೯೧೨) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ೫೦:೫೦ ಅನುಪಾತದಡಿ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು ;

(ಆ) ೫೦:೫೦ ಅನುಪಾತದಡಿ ನಿವೇಶನ ಹಂಚಿಕೆ ಮಾಡಲು ಅನುಸರಿಸಿದ ಮಾನದಂಡಗಳೇನು ;

(ಇ) ಮಾನದಂಡಗಳನುಸಾರ ೫೦:೫೦ ಅನುಪಾತದಡಿ ನಿವೇಶನಗಳ ಹಂಚಿಕೆ ಕ್ರಮವಾಗಿರುವದನ್ನು ಹೊರತುಪಡಿಸಿ, ಮಾನದಂಡ ಪಾಲಿಸದೆ ನಿವೇಶನಗಳನ್ನು ಹಂಚಿಕೆ ಮಾಡಿರುವ ಪ್ರಕರಣಗಳಲ್ಲಿ ತಪ್ಪುಗಳಾಗಿರುವುದು ಕಂಡುಬಂದ ಸಂದರ್ಭದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ನಿಯಮ ಬಾಹಿರವಾಗಿ ೫೦:೫೦ ಅನುಪಾತದಡಿ ನಿವೇಶನ ಹಂಚಿಕೆ ಮಾಡಿರುವ ಪ್ರಕರಣಗಳಿಂದ ಮೂಡಾಗೆ ಆಗಿರುವ ಆರ್ಥಿಕ ನಷ್ಟವೆಷ್ಟು ;

(ಉ) ಈ ನಷ್ಟ ಭರಿಸುವುದಕ್ಕೆ ಅಥವಾ ನಷ್ಟಕ್ಕೆ ಕಾರಣರಾದವರಿಂದ ವಸೂಲಿ ಮಾಡಿರುವುದಕ್ಕೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಿ.ಎ ನಿವೇಶನಗಳ ಬಗ್ಗೆ

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೮ (೯೧೧) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮೂಡಾ) ಮೈಸೂರು ನಗರದಲ್ಲಿ ಗುರುತಿಸಿರುವ ಸಿ.ಎ ನಿವೇಶನಗಳ ಸಂಖ್ಯೆ ಎಷ್ಟು ;

(ಆ) ಈ ಸಿ.ಎ. ನಿವೇಶನಗಳನ್ನು ಎಷ್ಟು ಜನರಿಗೆ ಹಂಚಿಕೆ ಮಾಡಲಾಗಿದೆ ; ಪ್ರಸ್ತುತ ಉಳಿದಿರುವ ಸಿ.ಎ ನಿವೇಶನಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

(ಇ) ಹಂಚಿಕೆ ಮಾಡಲಾದ ಸಿ.ಎ ನಿವೇಶನಗಳಿಂದ ಮೂಡಾಗೆ ಜಮೆಯಾದ ಹಣವೆಷ್ಟು ; (ವಿವರ ಒದಗಿಸುವುದು)

(ಈ) ಉಳಿದಿರುವ ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡದಿರಲು ಕಾರಣಗಳೇನು ; ಯಾವಾಗ ಹಂಚಿಕೆ ಮಾಡಲಾಗುವುದು ?

## ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಮಂಜೂರಾತಿ ಸಲುವಾಗಿ ಬಂದಿರುವ ಅರ್ಜಿಗಳ ಬಗ್ಗೆ

**ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೨೯ (೯೧೩) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನ ಮಂಜೂರಾತಿ ಕೋರಿ ಬಂದ ಅರ್ಜಿಗಳ ಪೈಕಿ ಸುಮಾರು ೭೦ ಸಾವಿರ ಅರ್ಜಿಗಳು ಪ್ರಾಧಿಕಾರದಲ್ಲೆ ಬಾಕಿ ಉಳಿದಿದ್ದು, ಈ ಅರ್ಜಿಗಳಿಂದ ಬಂದ ಹಣ ಎಷ್ಟು ;

(ಆ) ಅರ್ಜಿ ಹಾಕಿದಂತಹವರಿಗೆ ಯಾವ ಕಾಲಮಿತಿಯೊಳಗೆ ನಿವೇಶನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ?

## ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೦ (೯೩೦) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಜನಸಂಖ್ಯಾವಾರು ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳಾಗಿ ಹಾಗೂ ಪುರಸಭೆಗಳನ್ನು ನಗರ ಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ; (ವಿವರ ನೀಡುವುದು)

(ಇ) ಹೌದಾದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗಳಾಗಿ ಹಾಗೂ ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆಯೇ ? (ವಿವರ ನೀಡುವುದು)

## ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೩೧ (೯೩೧) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಕೇಡ ಗ್ರಾಮದಲ್ಲಿರುವ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಮುಚ್ಚಲ್ಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಸಕ್ಕರೆ ಕಾರ್ಖಾನೆ ಮುಚ್ಚಲು ಕಾರಣವೇನು ;

(ಆ) ಈ ಸಕ್ಕರೆ ಕಾರ್ಖಾನೆಯನ್ನು ಮುಚ್ಚಿರುವುದರಿಂದ ಸ್ಥಳೀಯ ರೈತರಿಗೆ ಅನಾನುಕೂಲವಾಗುವುದಿಲ್ಲವೇ ;

(ಇ) ಈ ಸಕ್ಕರೆ ಕಾರ್ಖಾನೆಯನ್ನು ಪುನಃ ಪ್ರಾರಂಭಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ಹಾಗೂ ಯಾವ ಕಾಲಮಿತಿಯಲ್ಲಿ ಈ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸಲಾಗುವುದು ?

## ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೨ (೯೩೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಸಂಘಗಳಲ್ಲಿ ಮಹಿಳೆಯರ ಪಾತ್ರವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಆ) ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವು ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ ;

(ಇ) ಸರ್ಕಾರವು ಸಹಕಾರ ಸಂಘಗಳ ಮೂಲಕ ಮಹಿಳೆಯರಿಗೆ ಕೌಶಲ್ಯ ಅಭಿವೃದ್ಧಿಯನ್ನು ನೀಡುತ್ತಿದೆಯೇ ; (ಸಂಪೂರ್ಣ ವಿವರ ಒದಗಿಸುವುದು) ಹಾಗೂ ಇಲ್ಲದಿದ್ದಲ್ಲಿ, ಭವಿಷ್ಯದಲ್ಲಿ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಕೌಶಲ್ಯ ಅಭಿವೃದ್ಧಿಗೆ ಪರಿಗಣಿಸಿ ಸರ್ಕಾರವು ಕ್ರಮ ಕೈಗೊಳ್ಳುವುದೇ ?

## ಬಸವಕಲ್ಯಾಣ ನಗರಸಭೆಯ ಕಾಮಗಾರಿಗಳ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೩ (೯೩೩) ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಸವಕಲ್ಯಾಣ ನಗರಸಭೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಿಂದ ಇಲ್ಲಿಯವರೆಗೂ ಎಷ್ಟು ಕಾಮಗಾರಿಗಳಿಗೆ

ಅನುಮೋದನೆ ದೊರಕಿದೆ; ಅದರಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಬಾಕಿ ಇರುವ ಕಾಮಗಾರಿಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಈ ಕಾಮಗಾರಿಗಳು ಬಾಕಿ ಇರಲು ಕಾರಣವೇನು ; (ವಿವರ ನೀಡುವುದು) ಹಾಗೂ ಕಾಮಗಾರಿಗಳು ಯಾವ ಯಾವ ಯೋಜನೆಯಡಿಯಲ್ಲಿ ಮಂಜೂರಾಗಿದೆ ; ಮಂಜೂರಾಗಿರುವ ಅನುದಾನವನ್ನು ಪ್ರತ್ಯೇಕವಾಗಿ ತಿಳಿಸುವುದು ;

(ಇ) ಗುತ್ತಿಗೆದಾರರಿಗೆ ಹಣವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳು ಯಾವುವು ಹಾಗೂ ಗುತ್ತಿಗೆದಾರರಿಗೆ ಹಣವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ?

## ಗಣಿ ಬಾಧಿತ ಪ್ರದೇಶಾಭಿವೃದ್ಧಿ ನಿಧಿ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೪ (೯೮೧) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸ್ಥಾಪಿಸಿರುವ ಗಣಿಬಾಧಿತ ಪ್ರದೇಶಾಭಿವೃದ್ಧಿ ಎಷ್ಟು ಹಣವಿದೆ ; (ವಿವರ ಒದಗಿಸುವುದು)

(ಆ) ಕಳೆದ ಎರಡು ವರ್ಷದಿಂದ ಯಾವ ಯಾವ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; (ಕಾಮಗಾರಿಗಳ ವಿವರ ಒದಗಿಸುವುದು)

(ಇ) ಈ ಪ್ರದೇಶಾಭಿವೃದ್ಧಿ ನಿಧಿಯಿಂದ ರಾಜ್ಯ ಸರ್ಕಾರಕ್ಕೆ ಯಾವ ರೀತಿ ಅನುಕೂಲವಾಗುತ್ತಿದೆ ;

(ಈ) ಕಳೆದ ೨ ವರ್ಷದಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಈ ಪ್ರದೇಶಾಭಿವೃದ್ಧಿ ನಿಧಿಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಸದರಿ ಕಾಮಗಾರಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ? (ವಿವರ ಒದಗಿಸುವುದು)

## ರಾಜ್ಯದಲ್ಲಿರುವ ರೈತರಿಗೆ ನೀಡುತ್ತಿರುವ ಬೆಳೆ ಸಾಲದ ಮಾಹಿತಿ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೫ (೯೮೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೨ ವರ್ಷದಿಂದ ರಾಜ್ಯದಲ್ಲಿ ಎಷ್ಟು ರೈತರಿಗೆ ಬೆಳೆ ಸಾಲ ನೀಡಲಾಗಿದೆ ; (ಜಿಲ್ಲಾವಾರು ರಾಷ್ಟ್ರೀಕೃತ ಮತ್ತು ಕೋ-ಅಪರೇಟಿವ್ ಬ್ಯಾಂಕ್‌ಗಳ ಮೂಲಕ ವಿವರ ಒದಗಿಸುವುದು)

(ಆ) ಈವರೆಗೆ ಮರು ಪಾವತಿ ಆಗದಿರುವ ಬೆಳೆಸಾಲ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಸುಸ್ಥಿಯಾಗಿರುವ ಬೆಳೆ ಸಾಲಗಳಿಗೆ One Time Settlement (ರಾಷ್ಟ್ರೀಕೃತ ಮತ್ತು ಕೋ-ಅಪರೇಟಿವ್ ಬ್ಯಾಂಕ್‌ಗಳ) ಯೋಜನೆ ಜಾರಿ ಮಾಡಲಾಗಿದೆಯೇ ; (ವಿವರ ಒದಗಿಸುವುದು)

(ಈ) ಬೆಳೆ ಸಾಲ ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದರೇ, ಸಾಲ ಮನ್ನಾ ಯಾವಾಗ ಮಾಡಲಾಗುವುದು ; ಈ ಬಗ್ಗೆ ಸರ್ಕಾರದ ನಿಲುವೇನು ? (ಸಂಪೂರ್ಣ ವಿವರ ಒದಗಿಸುವುದು)

## ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಮಾಹಿತಿ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೩೬ (೯೮೩) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸರ್ಕಾರಿ ಹಾಗೂ ಖಾಸಗಿ ಸಣ್ಣ ಕೈಗಾರಿಕೆಗಳಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ರಾಜ್ಯ ಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ನೀಡುತ್ತಿರುವ ವಿದ್ಯುತ್ ಪ್ರತಿ ಯೂನಿಟ್‌ನ ದರ ಎಷ್ಟು ; ಕಳೆದ ೨ ವರ್ಷಗಳಿಂದ ಎಷ್ಟು ಬಾರಿ ದರ ಹೆಚ್ಚಿಸಲಾಗಿದೆ ; (ಕಳೆದ ೩ ವರ್ಷಗಳ ಯೂನಿಟ್ ದರಗಳ ಬಗ್ಗೆ ವಿವರ ಒದಗಿಸುವುದು)

(ಇ) ರಾಜ್ಯ ಸರ್ಕಾರದಿಂದ ಸಣ್ಣ ಕೈಗಾರಿಕೆ ಪ್ರದೇಶಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡಲು ಸರ್ಕಾರದಿಂದ ಯಾವ ಸವಲತ್ತು ನೀಡಲಾಗಿದೆ; ಸೋಲಾರ್ ವಿದ್ಯುತ್ ಉತ್ಪಾದನೆ ಮಾಡಲು ಸಣ್ಣ ಕೈಗಾರಿಕೆಗೆ ಸಹಾಯಧನ ನೀಡಲಾಗುತ್ತಿದೆಯೇ ? (ನೀಡಲಾಗುತ್ತಿದ್ದರೆ ವಿವರ ಒದಗಿಸುವುದು)

## ಜಾಗತಿಕ ಹೂಡಿಕೆದಾರರ ಸಭೆ (Global Investors Meet) ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೭ (೯೭೬) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜಾಗತಿಕ ಹೂಡಿಕೆದಾರರ ಸಭೆ (Global Investors Meet) ಗಳನ್ನು ಸರ್ಕಾರದ ವತಿಯಿಂದ ಆಯೋಜಿಸಲಾಗಿದೆ ಮತ್ತು ಪ್ರಸ್ತುತ ಮುಂಬರುವ ವರ್ಷದಲ್ಲಿ ಈ ಸಭೆಯನ್ನು ಆಯೋಜಿಸಲು ಸರ್ಕಾರ ಯೋಜಿಸಿದೆಯೇ ; ಸಭೆಯ ಆಯೋಜನೆಯಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜಾಗತಿಕ ಹೂಡಿಕೆದಾರರು ರಾಜ್ಯದಲ್ಲಿ ಹೂಡಿಕೆ ಮಾಡಲು ಆಸಕ್ತಿ ತೋರಿದ್ದಾರೆ ; (ದೇಶವಾರು ಮತ್ತು ವರ್ಷವಾರು ಹೂಡಿಕೆ ಮೊತ್ತ ಮತ್ತು ಯಾವ ಕ್ಷೇತ್ರದಲ್ಲಿ ಹೆಚ್ಚು ಹೂಡಿಕೆಯಾಗಿರುವ ವಿವರಗಳನ್ನು ನೀಡುವುದು)

(ಆ) ರಾಜ್ಯದಲ್ಲಿ ಜಾಗತಿಕ ಹೂಡಿಕೆದಾರರ ಸಭೆ (Global Investors Meet) ಗಳನ್ನು ಆಯೋಜಿಸುತ್ತಿರುವುದರಿಂದ ಸರ್ಕಾರಕ್ಕೆ ಎಷ್ಟು ಲಾಭದಾಯಕವಾಗುತ್ತದೆ ಮತ್ತು ಇದರಿಂದಾಗಿ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ ? (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

## ಜವಳಿ ಪಾರ್ಕ್‌ಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೩೮ (೯೭೭) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಜವಳಿ ಪಾರ್ಕ್‌ಗಳು ಇವೆ; ಹಾವೇರಿ ಜಿಲ್ಲೆಯನ್ನು ಹೊರತುಪಡಿಸಿ ಬೇರೆ ಯಾವ ಜಿಲ್ಲೆಗಳಲ್ಲಿ ಈ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆ ;

(ಆ) ಈಗಾಗಲೇ ಸ್ಥಾಪಿತವಾಗಿರುವ ಜವಳಿ ಪಾರ್ಕ್‌ಗಳಿಂದ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ ;

(ಇ) ಈ ಸ್ಥಾಪಿತ ಜವಳಿ ಪಾರ್ಕ್‌ಗಳಲ್ಲಿ ಮಹಿಳಾ ನೌಕರರು ಹೆಚ್ಚಾಗಿದ್ದು, ಇವರಿಗೆ ಸುಧಾರಿತ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ;

(ಈ) ಈ ಜವಳಿ ಪಾರ್ಕ್‌ಗಳಲ್ಲಿ ಮಹಿಳಾ ಉದ್ಯಮಿಗಳಿಗೆ ಕೈಗಾರಿಕೆ ಸ್ಥಾಪಿಸಲು ಸರ್ಕಾರದ ವತಿಯಿಂದ ಸಹಾಯಧನ ನೀಡಲಾಗುತ್ತಿದೆಯೇ ಅಥವಾ ಬೇರೆ ಯಾವುದಾದರೂ ಯೋಜನೆಗಳನ್ನು ಸರ್ಕಾರ ರೂಪಿಸಿದೆಯೇ ?

## ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ನಿವೇಶನ/ಶೆಡ್‌ಗಳ ಹಂಚಿಕೆ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೩೯ (೯೭೭೮) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಣ್ಣ ಕೈಗಾರಿಕಾ ಇಲಾಖೆ ವ್ಯಾಪ್ತಿಯಡಿಯಲ್ಲಿ ಬರುವ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕೆ.ಎಸ್.ಎಸ್.ಐ.ಡಿ.ಸಿ) ವತಿಯಿಂದ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕಾ ವಸಾಹತುಗಳಲ್ಲಿ ಎಷ್ಟು ನಿವೇಶನಗಳನ್ನು / ಶೆಡ್‌ಗಳನ್ನು ಹಂಚಿಕೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಹಾಗೂ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಇ) ಪ್ರತ್ಯೇಕವಾಗಿ ಬೆಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ನಿವೇಶನಗಳನ್ನು/ಶೆಡ್‌ಗಳನ್ನು ಉದ್ಯಮಿದಾರರಿಗೆ ನೀಡಲಾಗಿದೆ ; ಸೈಟ್‌ಗಳು/ಶೆಡ್‌ಗಳ ಹಂಚಿಕೆ ಮಾಡಲು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಈ ವಸಾಹತುಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರದ ವತಿಯಿಂದ ಉದ್ಯಮಿದಾರರಿಗೆ ನೆರವು ನೀಡಲಾಗುತ್ತಿದೆಯೇ ; ಈ ನಿವೇಶನಗಳನ್ನು/ಶೆಡ್‌ಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಮೀಸಲಾತಿಯನ್ನು ಪರಿಗಣಿಸಿ ಹಂಚಿಕೆ ಮಾಡಲಾಗುತ್ತಿದೆಯೇ ಮತ್ತು ರಾಜ್ಯ ಮತ್ತು ದೇಶದ ಪ್ರಗತಿ/ಆರ್ಥಿಕ ಬೆಳವಣಿಗೆಯಲ್ಲಿ ಸಣ್ಣ ಕೈಗಾರಿಕೆಗಳ ಕೊಡುಗೆ ಎಷ್ಟು ?

## ಗಣಿಗಾರಿಕೆ ಪ್ರದೇಶಗಳಲ್ಲಿ ನಾಗರೀಕ ಸಮುದಾಯಗಳ ಮೇಲೆ ಬೀರುತ್ತಿರುವ ಪರಿಣಾಮಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೦ (೯೭೯) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಣಿಕಾರಿಕೆ ಪ್ರದೇಶಗಳ ಸಮೀಪದಲ್ಲಿ ಸ್ಥಾಪಿತವಾಗಿರುವ ನಾಗರೀಕ ಸಮುದಾಯಗಳ ಮೇಲೆ ಆರ್ಥಿಕವಾಗಿ ಬೀರುತ್ತಿರುವ ಪರಿಣಾಮಗಳೇನು ; (ಮಾಹಿತಿ ನೀಡುವುದು)

(ಆ) ಈ ವಲಯುವು ಸುಧಾರಿತ ತಂತ್ರಜ್ಞಾನದ ಮೂಲಕ ಮೂಲಸೌಕರ್ಯಗಳ ನಾವಿಣ್ಯತೆ ಮತ್ತು ಅಭಿವೃದ್ಧಿಯ ಮೂಲಕ ನಾಗರೀಕ ಅವಕಾಶಗಳನ್ನು ಸೃಷ್ಟಿಸುತ್ತದೆಯೇ ;

(ಇ) ಗಣಿಗಾರಿಕೆಯ ಮೂಲಕ ಖನಿಜ ಸಂಪನ್ಮೂಲಗಳ ಬಳಕೆಯನ್ನು ಹೆಚ್ಚಿಸಲು ಆಡಳಿತ ಕಾರ್ಯವಿಧಾನಗಳನ್ನು ಸರಳಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ;

(ಈ) ಅಪಘಾತಗಳಿಗೆ ಕಾರಣವಾಗಬಹುದಾದ ಅನಧೀಕೃತ ಅಥವಾ ಅವೈಜ್ಞಾನಿಕ ಗಣಿಗಾರಿಕೆಯನ್ನು ತಡೆಗಟ್ಟಲು ಗಣಿಗಾರಿಕೆ ಸಂಬಂಧಿತ ನಿಯಮಗಳ ಅನುಷ್ಠಾನದಲ್ಲಿ ಕೈಗೊಂಡ ಕ್ರಮಗಳೇನು ;

(ಉ) ಗಣಿಗಾರಿಕೆ ಕ್ಷೇತ್ರದ ಬೆಳವಣಿಗೆಯ ಸಾಮರ್ಥ್ಯವನ್ನು ಸುಧಾರಿಸಲು ರಚನಾತ್ಮಕ ಬದಲಾವಣೆಗಳು, ಆಡಳಿತ ನೀತಿಗಳು ಮತ್ತು ಜಾಗತಿಕ ಗುಣಮಟ್ಟದ ತಾಂತ್ರಿಕ ಪ್ರಗತಿಗಳನ್ನು ಅಳವಡಿಸಿಕೊಳ್ಳಲು ಇಲಾಖೆಯು ಉದ್ದೇಶಿಸಿದೆಯೇ ?

## ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ (ಬುಡಾ) ವತಿಯಿಂದ ಹಂಚಿಕೆಯಾಗಿರುವ ನಿವೇಶನಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೧ (೯೮೦) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೯ ರಿಂದ ೨೦೨೫ರವರೆಗೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ (ಬುಡಾ) ವತಿಯಿಂದ ಹಂಚಿಕೆಯಾಗಿರುವ ನಿವೇಶನಗಳ ಸಂಖ್ಯೆ ಎಷ್ಟು; ಈ ನಿವೇಶನಗಳಲ್ಲಿ ಹಿಂದುಳಿದ ಮತ್ತು ಶೋಷಿತ ವರ್ಗದವರಿಗೆ ಹಂಚಿಕೆ ಮಾಡಲಾಗಿರುವ ನಿವೇಶನಗಳೆಷ್ಟು ;

(ಆ) ಈ ಅವಧಿಯಲ್ಲಿ ಬುಡಾದಿಂದ ಹಂಚಿಕೆಯಾಗಿರುವ ನಿವೇಶನಗಳಲ್ಲಿ ಹಲವಾರು ನಿವೇಶನಗಳನ್ನು ಶಾಸಕಾಂಗ ಮತ್ತು ಕಾರ್ಯಾಂಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಬಂಧಿಕರಿಗೆ ಹಂಚಿಕೆಯಾಗಿರುವ ಮಾಹಿತಿ ನಿಜವೇ ; ನಿಜವಾದಲ್ಲಿ, ಯಾವ ವರ್ಷದಲ್ಲಿ ಮತ್ತು ಯಾರ್‍ಯಾರಿಗೆ ನಿವೇಶನಗಳು ಹಂಚಿಕೆಯಾಗಿವೆ ; ಮಾಹಿತಿ ನೀಡುವುದು ; ಇವರುಗಳಿಗೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗಿದೆಯೇ ಅಥವಾ Manual ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗಿದೆಯೇ ;

(ಇ) ಹಂಚಿಕೆಯಾಗದಿರುವ ನಿವೇಶನಗಳನ್ನು ಸಾರ್ವಜನಿಕರಿಗೆ ಹರಾಜು ಮೂಲಕ ನೀಡಲಾಗಿದೆಯೇ ಅಥವಾ Manual ಪ್ರಕ್ರಿಯೆ ಕೈಗೊಂಡು ಹಂಚಿಕೆ ಮಾಡಲಾಗಿದೆಯೇ ; Manual ಪ್ರಕ್ರಿಯೆ ಕೈಗೊಂಡು ಹಂಚಿಕೆ ಮಾಡಿದ್ದಲ್ಲಿ, ಸರ್ಕಾರಕ್ಕೆ ಆಗಿರುವ ನಷ್ಟವೆಷ್ಟು ; Manual ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲು ಸರ್ಕಾರದಲ್ಲಿ ಅವಕಾಶವಿದೆಯೇ ;

(ಈ) ಪ್ರಸ್ತುತ ೨೦೨೪ನೇ ಸಾಲಿನ ಪ್ರಾಧಿಕಾರದ ವತಿಯಿಂದ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ಯೋಜಿಸಿದೆ; ಈ ಕಾರ್ಯಕ್ಕಾಗಿ ಭೂಮಿಯನ್ನು ಗುರುತಿಸಿ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ಮತ್ತು ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ ; (ಮಾಹಿತಿ ನೀಡುವುದು)

(ಉ) ಈ ಅನಧಿಕೃತ ಹಂಚಿಕೆ ಕುರಿತು ಉನ್ನತ ಅಧಿಕಾರಿ ಮಟ್ಟದ ವಿಚಾರಣೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಲಾಗಿದ್ದು, ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ?

# ಉತ್ತರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳು ಮತ್ತು ಸಕ್ಕರೆ ನಿವೇಶನಾಲಯ ಸ್ಥಳಾಂತರ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) :-**

೮೪೨ (೯೧೪) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗು ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಉತ್ತರ ಕರ್ನಾಟಕದ ಭಾಗದಲ್ಲಿರುವ ಒಟ್ಟು ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ಯಾವುವು ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಅತೀ ಹೆಚ್ಚು ಕಬ್ಬು ಬೆಳೆಯುತ್ತಿರುವ ಜಿಲ್ಲೆ ಬೆಳಗಾವಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಹಿಂದಿನ ಸರ್ಕಾರ ಅವಧಿಯಲ್ಲಿ ಸಕ್ಕರೆ ನಿರ್ದೇಶನಾಲಯ ಕಛೇರಿಯನ್ನು ಬೆಳಗಾವಿ ಜಿಲ್ಲೆಗೆ ಸ್ಥಳಾಂತರಿಸಲು ಆದೇಶವಾಗಿದ್ದರೂ ಸ್ಥಳಾಂತರ ಮಾಡದಿರಲು ಕಾರಣಗಳೇನು ; ಸ್ಥಳಾಂತರ ಮಾಡಲು ಇರುವ ಅಡಚಣೆಗಳೇನು ;

(ಇ) ಸದರಿ ನಿರ್ದೇಶನಾಲಯವನ್ನು ಯಾವ ಸ್ಥಳದಲ್ಲಿ ಸ್ಥಳಾಂತರಿಸಲು ನಿರ್ಧರಿಸಲಾಗಿದೆ ; ಸ್ಥಳ ಪರಿಶೀಲನೆ ಮಾಡಲಾಗಿದೆಯೇ ; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ನಿರ್ದೇಶನಾಲಯವು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸಮಗ್ರ ಉತ್ತರ ಕರ್ನಾಟಕ ಭಾಗದ ಕಬ್ಬು ಬೆಳೆಗಾರರಿಗೆ ಮತ್ತು ಕಾರ್ಖಾನೆ ಮಾಲೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಸದರಿ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸಲಾಗುವುದು ? (ಮಾಹಿತಿ ನೀಡುವುದು)

## ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) :-**

೮೪೩ (೯೧೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ನಗರದಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟ ಅನುದಾನ ಎಷ್ಟು ;

(ಆ) ಬೆಂಗಳೂರಿನಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿರುವ ಎಲ್ಲಾ ಸೌಲಭ್ಯಗಳು ಬಾಗಲಕೋಟೆ ವಿಶ್ವವಿದ್ಯಾಲಯಕ್ಕೆ ಒದಗಿಸಲಾಗಿದೆಯೇ ; ಒದಗಿಸಿದ್ದಲ್ಲಿ, ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ಇನ್ನು ಒದಗಿಸಬೇಕಾದ ಸೌಲಭ್ಯಗಳು ಯಾವುವು ; ಯಾವ ಕಾಲಮಿತಿಯೊಳಗೆ ಒದಗಿಸಲಾಗುವುದು ; (ವಿವರ ನೀಡುವುದು)

(ಇ) ಬೆಂಗಳೂರಿನ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿರುವ ಸಫಲ ಎಂಬ ಮಾರುಕಟ್ಟೆಯನ್ನು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಇರುವ ಅಡಚಣೆಗಳೇನು ; (ಸಂಪೂರ್ಣ ಮಾಹಿತಿಯೊಂದಿಗೆ ವಿವರಿಸುವುದು)

(ಈ) ಸದರಿ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಸ್ಥಾಪಿಸಲಾಗುವುದು ? (ಮಾಹಿತಿ ನೀಡುವುದು)

## ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) :-**

೮೪೪ (೯೨೫) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಬೇರೆ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿವೆಯೇ ; ಇದ್ದಲ್ಲಿ, ಪ್ರಸ್ತಾವನೆ ಸಲ್ಲಿಸಲು ಕಾರಣಗಳೇನು ;

(ಆ) ಸದರಿ ವಿಶ್ವವಿದ್ಯಾಲಯವನ್ನು ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳಿಸಲು ಶಿಫಾರಸ್ಸು ಮಾಡಲಾಗಿದೆಯೇ ; (ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ವಿಶ್ವವಿದ್ಯಾಲಯವನ್ನು ಸೇರ್ಪಡೆಗೊಳಿಸದೇ ಬಾಗಲಕೋಟೆಯಲ್ಲಿಯೇ ಮುಂದುವರೆಸಲು ಇರುವ ಅಡಚಣೆಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ವಿಶ್ವವಿದ್ಯಾಲಯವನ್ನು ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳಿಸುವ ಪ್ರಸ್ತಾವನೆಯನ್ನು ಸರ್ಕಾರ ಕೈಬಿಡಬೇಕೆಂದು ಆ ಭಾಗದ ಜನಪ್ರತಿನಿಧಿಗಳು ಹಾಗೂ ಸಚಿವರು ಒತ್ತಾಯಿಸಿರುವುದು ನಿಜವೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು ?

**ಪುರಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರ ಕುರಿತು**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ ) :-**

೮೪೫ (೯೮೫) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಪುರಸಭೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್ ಹುದ್ದೆಯು ವೃಂದ ಮತ್ತು ನೇಮಕಾತಿಯಲ್ಲಿದೆಯೇ ; ಹಾಗಿದ್ದಲ್ಲಿ, ಈಗಾಗಲೇ ಕನ್ಸಲ್ಟೆನ್ಸಿ ಗುತ್ತಿಗೆ ಆಧಾರದ ಮೇಲೆ ಸುಮಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಜೂನಿಯರ್ ಪ್ರೋಗ್ರಾಮರ್‌ಗಳನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸದರಿ ಜೂನಿಯರ್ ಪ್ರೋಗ್ರಾಮರ್‌ಗಳ ಕನಿಷ್ಟ ವೇತನ ಹಾಗೂ ಸೇವಾ ಭದ್ರತೆ ಇಲ್ಲದೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ಇವರುಗಳನ್ನು ಸಮಾನ ಕೆಲಸ, ಸಮಾನ ವೇತನದಡಿ/ನೇರ ಪಾವತಿಯಡಿ ಅಥವಾ ಖಾಯಂಗೊಳಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ಅಧಿವೇಶನದಲ್ಲಿ ಜೂನಿಯರ್ ಪ್ರೋಗ್ರಾಮರ್‌ಗಳನ್ನು ಖಾಯಂಗೊಳಿಸಲು ಪೌರಾಡಳಿತ ನಿರ್ದೇಶನಾಲಯ/ ಕೆ.ಎಂ.ಡಿ.ಎಸ್ ನಿಂದ ಯಾವುದೇ ಪ್ರಸ್ತಾವನೆ ಸಲ್ಲಿಸಿರುವುದಿಲ್ಲವೆಂದು ತಿಳಿಸಿದ್ದು ಕಡತ ಸಂಖ್ಯೆ: ನಅಇ-ಇಎಂಸಿ/೬೪/೨೦೨೨, ದಿನಾಂಕ:೨೮-೦೯-೨೦೨೨ರಲ್ಲಿ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಸದರಿ ಪ್ರಸ್ತಾವನೆಯು ಆಡಳಿತ ಮತ್ತು ಸಿಬ್ಬಂದಿ ಇಲಾಖೆ ಹಾಗೂ ಹಣಕಾಸು ಇಲಾಖೆಯಿಂದ ಅನುಮೋದನೆಯಾಗಿರುವುದು ನಿಜವೇ ; ಆಗಿದ್ದಲ್ಲಿ, ನೇಮಕಾತಿ ಆದೇಶವನ್ನು ತಡೆಹಿಡಿಯಲು ಕಾರಣಗಳೇನು ?

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಹರಿಂದ ಆಗಿರುವ ಹಾನಿ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೬ (೨೮೬) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸಕ್ತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಾರಾಕಾರವಾಗಿ ಸುರಿದ ಮಳೆಯಿಂದಾಗಿ ಇತಿಹಾಸ ಕಂಡರಿಯದ ದೊಡ್ಡ ಮಟ್ಟದ ಪ್ರವಾಹ ಉಂಟಾಗಿ ಇಡೀ ಜಿಲ್ಲೆಯ ಜನಜೀವನವೇ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದ್ದಲ್ಲದೆ ತೋಟಗಾರಿಕೆ ಬೆಳೆಗಾರರಿಗೆ ಅತ್ಯಂತ ಸಂಕಷ್ಟದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದ್ದು,

ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಈ ಮಳೆಹಾನಿಯಿಂದಾಗಿ ತೋಟಗಾರಿಕೆ ಬೆಳೆಗಾರರಿಗೆ ಆಗಿರುವ ನಷ್ಟದ ಒಟ್ಟು ಅಂದಾಜು ಮೊತ್ತವೆಷ್ಟು ;

(ಆ) ಸರ್ಕಾರ ಸದರಿ ಮಳೆಹಾನಿ ಪರಿಹಾರದ ಪೂರ್ಣ ಮೊತ್ತವನ್ನು ಈಗಾಗಲೇ ಬಿಡುಗಡೆಗೊಳಿಸಿದೆಯೇ ; ಇಲ್ಲದಿದ್ದಲ್ಲಿ, ಇನ್ನೂ ಬಾಕಿ ಇರುವ ಪರಿಹಾರದ ಹಣದ ಮೊತ್ತವೆಷ್ಟು ; ತೋಟಗಾರಿಕೆ ಬೆಳೆಗಾರರ ಸಂತ್ರಸ್ತ, ಜನರಿಗೆ ಸರ್ಕಾರ ಕಲ್ಪಿಸಿರುವ ಪರಿಹಾರ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಬಾಕಿ ಇರುವ ಪರಿಹಾರದ ಹಣವನ್ನು ಯಾವ ಕಾಲಮಿತಿಯೊಳಗೆ ಬಿಡುಗಡೆಗೊಳಿಸಲಾಗುವುದು ?

## ಅರ್ಹ ಬೆಳೆ ಸಾಲಗಾರರ ರೈತರಿಗೆ ಸಾಲ ಮನ್ನಾ ಮೊತ್ತ ಇನ್ನೂ ಬಿಡುಗಡೆಯಾಗದಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೭ (೯೨೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರವು ೨೦೧೮-೧೯ನೇ ಸಾಲಿನಲ್ಲಿ ರೈತರು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಪಡೆದಿರುವ ಬೆಳೆ ಸಾಲಗಳ ಪೈಕಿ ರೂ. ೧.೦೦ ಲಕ್ಷ ಮನ್ನಾ ಮಾಡಲಾಗಿದ್ದು, ವಿವಿಧ ಕಾರಣಗಳಿಂದ ಹಲವಾರು ಸಹಕಾರ ಸಂಘಗಳಲ್ಲಿ ಕೆಲವೊಂದು ಅರ್ಹ ಬೆಳೆ ಸಾಲಗಾರ ರೈತರಿಗೆ ಸಾಲ ಮನ್ನಾ ಮೊತ್ತ ಇನ್ನೂ ಬಿಡುಗಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ವಿಷಯದ ಕುರಿತು ಸಂಘದ ವಾರ್ಷಿಕ ಮಹಾಸಭೆಗಳಲ್ಲಿ ಸದಸ್ಯರು ಸಹಕಾರ ಸಂಘಗಳ ಆಡಳಿತ

ಮಂಡಳಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದು, ಈ ಸಾಲ ಮನ್ನಾ ಯೋಜನೆಯ ಬಾಕಿ ಉಳಿದ ರೈತರಿಗೆ ಬಾಕಿ ಮೊತ್ತ ಬಿಡುಗಡೆಯ ಬಗ್ಗೆ ಸರ್ಕಾರ ಇದುವರೆಗೆ ಯಾವ ಕ್ರಮ ಕೈಗೊಂಡಿದೆ ;

(ಇ) ಯಾವ ಕಾಲಮಿತಿಯೊಳಗೆ ಕೆಲವೊಂದು ಅರ್ಹ ಬೆಳೆ ಸಾಲಗಾರರ ರೈತರ ಇನ್ನೂ ಬಾಕಿ ಇರುವ ಸಾಲ ಮನ್ನಾ ಮೊತ್ತವನ್ನು ಬಿಡುಗಡೆಗೊಳಿಸಲಾಗುವುದು ?

## ಸಾಲದ ಮಿತಿ ಹೆಚ್ಚಾಗಿದ್ದರೂ ಹೆಚ್ಚುವರಿ ಸಾಲದ ಹಣವನ್ನು ವಿತರಣೆ ಮಾಡದಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೮೪೮ (೯೨೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಆಯವ್ಯಯ ಮಂಡನೆ ಸಂದರ್ಭದಲ್ಲಿ ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಬೆಳೆ ಸಾಲದ ಮಿತಿಯನ್ನು ೩ ಲಕ್ಷದಿಂದ ೫ ಲಕ್ಷಕ್ಕೆ ಏರಿಸಲಾಗಿದೆ ; ಈ ಬಗ್ಗೆ ಇನ್ನೂ ಸಹ ಸಂಬಂಧಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೆಚ್ಚುವರಿ ಮಾಡಿರುವ ರೂ. ೫.೦೦ ಲಕ್ಷಗಳನ್ನು ನೀಡದೆ ಇರುವುದರಿಂದ ಈ ಬಗ್ಗೆ ಸರ್ಕಾರ ಇದುವರೆಗೂ ಏನೂ ಕ್ರಮ ಕೈಗೊಂಡಿದೆ ;

(ಆ) ಕೃಷಿ ಅಭಿವೃದ್ಧಿಗಾಗಿ ಶೇಕಡಾ ೩%ರ ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮಿತಿಯನ್ನು ೧೦ ಲಕ್ಷದಿಂದ ೧೫ ಲಕ್ಷಕ್ಕೆ ಏರಿಕೆ ಮಾಡಲಾಗಿದೆ ; ಆದರೆ ಯಾವುದೇ ಪ್ರಾಥಮಿಕ ಸಹಕಾರ ಸಂಘಗಳು ೧೦ ಲಕ್ಷಕ್ಕಿಂತ ಜಾಸ್ತಿ ವಿತರಣೆ ಮಾಡದೆ ಈ ಬಗ್ಗೆ ಸರ್ಕಾರ ಏನೂ ಕ್ರಮ ಕೈಗೊಂಡಿದೆ ;

(ಇ) ಯಾವ ಕಾಲಮಿತಿಯೊಳಗೆ ಹೆಚ್ಚುವರಿ ಮಾಡಿದ ಹಣವನ್ನು ಇದುವರೆಗೆ ವಿತರಣೆ ಆಗದ ಸಾಲದ ಹಣವನ್ನು ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಸೂಕ್ತ ಕ್ರಮ ವಹಿಸಲಾಗುವುದು ?

## ಅಡಿಕೆಯ ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ ತಿಳಿಸಲು ವ್ಯಾಪಕ ಸಂಶೋಧನೆಗೆ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೪೯ (೯೨೩) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಿವಿಧ ಬಗೆಯ ಹಲವಾರು ಉತ್ಪನ್ನಗಳ ತಯಾರಿಕೆಯಲ್ಲಿ ಅಡಿಕೆ ಉತ್ಪನ್ನಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುತ್ತಿರುವ ಸಾಧ್ಯತೆಗಳ ಕುರಿತು ಸಂಶೋಧನೆಗೆ ಹಾಗೂ ಅಡಿಕೆ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವುದಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳೇನು ;

(ಆ) ಅಡಿಕೆ ಉತ್ಪನ್ನಗಳು ವ್ಯಾಪಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳ ಕುರಿತ ಸಂಶೋಧನೆಗೆ ಹಾಗೂ ಅಡಿಕೆ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಕಾರ್ಯಕ್ರಮ ಮತ್ತು ಯೋಜನೆಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇಲ್ಲಿಯವರೆಗೆ ವಿನಿಯೋಗಿಸಿರುವ ಅನುದಾನದ ವಿವರಗಳೇನು ;

(ಇ) ವಿವಿಧ ಬಗೆಯ ಔಷಧ, ಸಾಬೂನು, ಬಣ್ಣ, ಸಿರಪ್ ಹಾಗೂ ಇತರ ಹಲವಾರು ಉತ್ಪನ್ನಗಳ ತಯಾರಿಕೆಯಲ್ಲಿ ಕೂಡ ಅಡಿಕೆ ಉತ್ಪನ್ನಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ವಿಫುಲ

ಸಾಧ್ಯತೆಗಳಿದ್ದು, ಅದಕ್ಕೆ ಸಂಬಂಧಿಸಿದಂತೆ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ ತಿಳಿಸಲು ವ್ಯಾಪಕ ಸಂಶೋಧನೆ ಕೈಗೊಳ್ಳಲು ತ್ವರಿತವಾಗಿ ಅಗತ್ಯ ಕ್ರಮ ವಹಿಸಲು ಸರ್ಕಾರ ಈ ಕೂಡಲೇ ಮುಂದಾಗುವುದೇ ?

## ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿನ ನೇಮಕಾತಿ ಪ್ರಕ್ರಿಯೆ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೦ (೯೨೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಟ್ಟಿ ಚಿನ್ನದ ಗಣಿ ಕಂಪನಿಯ ವಿವಿಧ ವಿಭಾಗಗಳಲ್ಲಿ ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದ ಹಾಗೂ ಉಳಿಕೆ ಮೂಲ/ ಸ್ಥಳೀಯೇತರ ವೃಂದದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಂಖ್ಯೆ: ಹಚಿಗ/ ಮಾಸ/ಇಎಸ್‌ಟಿ/ನೇನೇಪ್ರ/೧೦/೨೦೨೩-೨೪, ದಿನಾಂಕ: ೧೫-೦೩-೨೦೨೪ರ ಪ್ರಕಟಣೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ನೇಮಕಾತಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಸದರಿ ನೇಮಕಾತಿಗೆ ಸಂಬಂಧಿಸಿದಂತೆ ಇದುವರೆಗೆ ಯಾವುದೇ ಪ್ರಕ್ರಿಯೆ ನಡೆಯದೇ ಇರಲು ಕಾರಣಗಳೇನು ; ಹಾಗೂ ಯಾವ ಕಾಲಮಿತಿಯೊಳಗೆ ಈ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗುವುದು ?

## ಎಲೆ ಚುಕ್ಕೆ ಮತ್ತು ಕೊಳೆ ರೋಗದಿಂದ ಹಾಳಾಗಿರುವ ಅಡಿಕೆಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೧ (೯೦೭) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಎಲೆ ಚುಕ್ಕೆ ಮತ್ತು ಕೊಳೆ ರೋಗದಿಂದ ಅಡಿಕೆಯ ಫಸಲು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೇ, ಎಷ್ಟು ಎಕರೆ ಅಡಿಕೆ ಬೆಳೆ ರೋಗಕ್ಕೆ ತುತ್ತಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಅಡಿಕೆ ಬೆಳೆ ರೋಗ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; ಅಡಿಕೆ ಬೆಳೆ ರೋಗದಿಂದ ನಷ್ಟಕ್ಕೊಳ್ಳಗಾಗಿರುವ ರೈತರಿಗೆ ಸರ್ಕಾರ ಪರಿಹಾರ ನೀಡಿದೆಯೇ ; ನೀಡಿರುವ ಪರಿಹಾರದ ಮೊತ್ತ ಎಷ್ಟು ;

(ಇ) ನೀಡದಿದ್ದಲ್ಲಿ, ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದರೆ, ಯಾವ ಕಾಲಮಿತಿಯೊಳಗೆ ಪರಿಹಾರ ನೀಡಲಾಗುವುದು ? (ವಿವರ ಒದಗಿಸುವುದು)

## ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಾಗ ಅನುಸರಿಸಿರುವ ನಿಯಮ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೨ (೯೦೮) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಚಿಕ್ಕಮಗಳೂರು ನಗರಸಭೆಯಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾಗ್ಯೂ ಸಹ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆ ಖಾಲಿ ಇರುವುದನ್ನು

ಆಧಾರವಾಗಿಟ್ಟುಕೊಂಡು ಜಿಲ್ಲಾಧಿಕಾರಿಗಳು ನಗರ ಸಭೆಯ ಚುನಾಯಿತ ಪ್ರತಿನಿಧಿಗಳ ಗಮನಕ್ಕೆ ತಾರದೆ ಅಧಿಕಾರಿಗಳ ಸಭೆ ನಡೆಸಿ ಸುಮಾರು ೧೦ ಕೋಟಿ ರೂ.ಗಳಿಗೂ ಹೆಚ್ಚು ಅನುದಾನ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರೀತಿ ಚುನಾಯಿತ ಪ್ರತಿನಿಧಿಗಳಿದ್ದಾಗ್ಯೂ ಅವರನ್ನು ಹೊರಗಿಟ್ಟು ಸಭೆ ನಡೆಸಿ ಕೋಟ್ಯಾಂತರ ರೂಪಾಯಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇದೆಯೇ ;

(ಇ) ಇದ್ದಲ್ಲಿ, ಯಾವ ಕಾಯ್ದೆಯ ಯಾವ ನಿಯಮದ ಪ್ರಕಾರ ಅಧಿಕಾರವನ್ನು ನೀಡಲಾಗಿದೆ ; ಅಧಿಕಾರ ಇಲ್ಲದಿದ್ದಲ್ಲಿ, ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲಾಗುವುದೇ ? (ವಿವರ ಒದಗಿಸುವುದು)

## ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳು ಪಡೆದಿರುವ ಸಾಲವನ್ನು ಮನ್ನಾ ಮಾಡುವ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೮೫೩ (೯೦೯) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ಆರ್ಥಿಕ ವರ್ಷದಿಂದ ಈವರೆಗೆ ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಎಷ್ಟು ಸ್ತ್ರೀ ಶಕ್ತಿ ಸ್ವ–ಸಹಾಯ ಗುಂಪುಗಳು ಸಾಲ ಪಡೆದಿವೆ ; ಪಡೆದಿರುವ ಸಾಲದ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ೨೦೨೪, ನವೆಂಬರ್ ಅಂತ್ಯಕ್ಕೆ ವಸೂಲಾಗಿರುವ ಸಾಲ ಮತ್ತು ಬಡ್ಡಿ ಮೊತ್ತ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಸ್ತ್ರೀ ಶಕ್ತಿ ಸ್ವ-ಸಹಾಯ ಗುಂಪುಗಳು ಪಡೆದಿರುವ ಎಲ್ಲಾ ರೀತಿಯ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಈ ಕುರಿತು ಸರ್ಕಾರದ ನಿಲುವೇನು ?

## ಕೈಗಾರಿಕೆ ವಿಸ್ತರಣೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ

**ಶ್ರೀ ಸಿ.ಟಿ.ರವಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೪ (೯೧೦) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೧೫ ವರ್ಷಗಳಿಂದ ಈವರೆಗೆ ರಾಜ್ಯದಲ್ಲಿ ಕೈಗಾರಿಕಾ ವಲಯ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಮತ್ತು ಸ್ವಾಧೀನ ಪ್ರಕ್ರಿಯೆ ಹಂತದಲ್ಲಿರುವ ಭೂಮಿ ಎಷ್ಟು ; ಈ ಪೈಕಿ ಭೂ ಸ್ವಾಧೀನಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು ; ಈ ಪ್ರಕರಣಗಳ ಇತ್ಯರ್ಥಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪೈಕಿ ಸರ್ಕಾರಿ ಮತ್ತು ಖಾಸಗಿ ಜಮೀನು ಎಷ್ಟು ; (ಜಿಲ್ಲಾವಾರು ವಿವರವನ್ನು ನೀಡುವುದು)

(ಇ) ಸ್ವಾಧೀನಪಡಿಸಿಕೊಂಡಿರುವ ಭೂಮಿಗೆ ಭೂ ಪರಿಹಾರ ನೀಡಲಾಗಿದೆಯೇ ; ಭೂ ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳೆಷ್ಟು ; ಭೂ ಪರಿಹಾರಕ್ಕೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಈ) ಸ್ವಾಧೀನಪಡಿಸಿಕೊಂಡಿರುವ ಭೂಮಿ ಪೈಕಿ ಜಿಲ್ಲಾವಾರು ವಿವಿಧ ಕೈಗಾರಿಕೆಗಳಿಗೆ ಮಂಜೂರು ಮಾಡಿರುವ ಭೂಮಿಯ ಪ್ರಮಾಣ ಎಷ್ಟು ; ಹಂಚಿಕೆ ಆಗದೆ ಬಾಕಿ ಉಳಿದಿರುವ ಭೂಮಿ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ನೊಳಂಬ ವೀರಶೈವ ಸಂಘ (ರಿ) ಇದರ ನೋಂದಣಿ ಮತ್ತು ಚುನಾವಣೆಗಳ ಬಗ್ಗೆ

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೫೫ (೯೨೯) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ನೋಂದಾಯಿಸಿ ಕೊಂಡಿರುವ ನೊಳಂಬ ವೀರಶೈವ ಸಂಘ (ರಿ) ಅಥವಾ ನೊಳಂಬ ಲಿಂಗಾಯಿತ ಸಂಘವು (ರಿ) ಅಸ್ತಿತ್ವದಲ್ಲಿದೆಯೇ ; ಹಾಗಿದ್ದಲ್ಲಿ, ಈ ಸಂಘವನ್ನು ಯಾವಾಗ ನೋಂದಾಯಿಸಲಾಯಿತು ; ಸಂಘದ ನೋಂದಣಿ ಪ್ರಮಾಣ ಪತ್ರ ಹಾಗೂ ಹಾಲಿ ಚಾಲ್ತಿಯಲ್ಲಿರುವ ಬೈಲಾ ಪ್ರತಿಯನ್ನು ನೀಡುವುದು ;

(ಆ) ಸದರಿ ಸಂಘದ ಬೈಲಾವನ್ನು ನೋಂದಣಿಯಾದ ದಿನದಿಂದ ಇಲ್ಲಿಯವರೆಗೆ ಎಷ್ಟು ಬಾರಿ ತಿದ್ದುಪಡಿ ಮಾಡಲಾಗಿದೆ ; ತಿದ್ದುಪಡಿ ಮಾಡಲಾಗಿರುವ ಬೈಲಾದ ಎಲ್ಲಾ ಪ್ರತಿಗಳನ್ನು ನೀಡುವುದು ; ನೋಂದಣಿಯಾದ ದಿನಾಂಕದಿಂದ ಇಲ್ಲಿಯವರೆಗೆ ಅಸ್ತಿತ್ವದಲ್ಲಿದ್ದರೆ, ಸಂಘಕ್ಕೆ ಸಂಬಂಧಿಸಿದ ಹಾಲಿ ಇರುವ ಎಲ್ಲಾ ರೀತಿಯ ದಾಖಲೆಗಳನ್ನು ಧೃಢೀಕರಿಸಿ ನೀಡುವುದು ;

(ಇ) ಸಂಘದಲ್ಲಿರುವ ಬೈಲಾದ ಪ್ರಕಾರ ಕಾರ್ಯಕಾರಿ ಮಂಡಳಿ ಅಸ್ತಿತ್ವದಲ್ಲಿದೆಯೇ ; ಸದರಿ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸಲಾಗಿದೆಯೇ ; ನಡೆಸಿದ್ದಲ್ಲಿ, ಚುನಾವಣೆ ಕುರಿತು ಮಾಹಿತಿ ನೀಡುವುದು ; ಚುನಾವಣೆ ನಡೆಸಲಾಗದೇ ಇದ್ದಲ್ಲಿ ನಡೆಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಈ) ಸದರಿ ಸಂಘದ ಸದಸ್ಯತ್ವ ಕುರಿತಂತೆ ಇರುವ ನಿಯಮಗಳೇನು ; ನಿಯಮಗಳನ್ನು ಮೀರಿ ಸಂಘದ ಸದಸ್ಯತ್ವ ನೀಡಿದ್ದಲ್ಲಿ, ಅವುಗಳನ್ನು ರದ್ದುಪಡಿಸುವ ಕುರಿತು ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)

(ಉ) ಸಂಘಗಳ ನಿಯಮಾನುಸಾರ ವಾರ್ಷಿಕ ಮಹಾಸಭೆಗಳನ್ನು ಕರೆಯುವ ಅಂತಿಮ ದಿನಾಂಕ ಯಾವುದು ; ಹಾಗಿದ್ದಲ್ಲಿ, ಸದರಿ ಸಂಘವು ಪ್ರಸಕ್ತ ಸಾಲಿನ ವಾರ್ಷಿಕ ಮಹಾಸಭೆ ನಡೆದಿರುವ ದಿನಾಂಕ ಮತ್ತು ಸಭಾ ನಡವಳಿಗಳನ್ನು ನೀಡುವುದು ; ನಡೆಯದೇ ಇದ್ದಲ್ಲಿ ಕಾರಣಗಳೇನು ? (ಮಾಹಿತಿ ನೀಡುವುದು)

# ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘದ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೬ (೯೦೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ), ಬೆಂಗಳೂರು ಇವರು ಈವರೆಗೆ ಎಷ್ಟು ಸದಸ್ಯರು ಮತ್ತು ಸಹ ಸದಸ್ಯರಿಂದ ನಿವೇಶನ ಹಂಚಿಕೆಗಾಗಿ ಪೂರ್ಣ ಹಣವನ್ನು ಸಂಗ್ರಹ ಮಾಡಿರುತ್ತಾರೆ: ಪ್ರತಿ ನಿವೇಶನಕ್ಕೆ ಸಂಗ್ರಹ ಮಾಡಿರುವ ಹಣ ಎಷ್ಟು ; (ವರ್ಷವಾರು ಸದಸ್ಯರು ಮತ್ತು ಸಹ ಸದಸ್ಯರಿಂದ ಪ್ರತ್ಯೇಕ ವಿವರ ನೀಡುವುದು)

(ಆ) ಸಂಘವು ಪೂರ್ಣ ಹಣವನ್ನು ಪಾವತಿ ಮಾಡಿರುವ ಸದಸ್ಯರು ಮತ್ತು ಸಹ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಎಷ್ಟು ಜನರಿಗೆ ನಿವೇಶನ ಹಂಚಿಕೆ ಆಗಿರುವುದಿಲ್ಲ: ಈವರೆಗೆ ನಿವೇಶನ ಹಂಚಿಕೆ ಮಾಡದಿರಲು ಕಾರಣಗಳೇನು ;

(ಇ) ಕಳೆದ ೩ ವರ್ಷದಿಂದ ಎಷ್ಟು ಸದಸ್ಯರು ಮತ್ತು ಸಹ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ; ಈ ಪೈಕಿ ನಿವೇಶನ ಹಂಚಿಕೆಯಾದ ಎಷ್ಟು ಜನರಿಗೆ ನಿವೇಶನ ನೋಂದಣಿ ಮಾಡಿಕೊಡಲಾಗಿದೆ ; (ಸಂಪೂರ್ಣ ವಿವರ ನೀಡುವುದು) ನಿವೇಶನ ನೋಂದಾಣಿಯಾಗದೆ ಬಾಕಿ ಇರುವವರಿಗೆ ಯಾವಾಗ ನೋಂದಣಿ ಮಾಡಿಕೊಡಲಾಗಿದೆ ;

(ಈ) ಸಂಘವು ಯಾವ ಭೂ ಅಭಿವೃದ್ಧಿದಾರರ ಜೊತೆ ಒಡಂಬಡಿಕೆ ಮಾಡಿಕೊಂಡಿದೆ ; ಮಾಡಿಕೊಂಡಿರುವ ಒಡಂಬಡಿಕೆಯೇನು ; ಒಡಂಬಡಿಕೆ ಅನ್ವಯ ಯಾವಾಗ ಎಷ್ಟು ನಿವೇಶನ ಹಸ್ತಾಂತರ ಮಾಡಬೇಕಿತ್ತು ;

(ಉ) ಭೂ ಅಭಿವೃದ್ಧಿದಾರರಿಂದ ಒಡಂಬಡಿಕೆ ಅನ್ವಯ ನಿವೇಶನ ಹಸ್ತಾಂತರವಾಗದೇ ಇರುವ ಕಾರಣ ಭೂ ಅಭಿವೃದ್ಧಿದಾರರ ವಿರುದ್ಧ ಸಂಘವು ದೂರು ನೀಡಿದೆಯೇ ; ಇಲ್ಲದಿದ್ದಲ್ಲಿ, ದೂರು ನೀಡದಿರಲು ಕಾರಣಗಳೇನು ?

## ಕರ್ನಾಟಕ ವಿಧಾನ ಮಂಡಲ ಗೃಹ ನಿರ್ಮಾಣ ಸಂಘದ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೭ (೯೦೨) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ವಿಧಾನ ಮಂಡಲದ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು : ಈ ಪೈಕಿ ಎಷ್ಟು ಸದಸ್ಯರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ ; ಪ್ರತೀ ಅರ್ಜಿದಾರರಿಂದ ಸಂಗ್ರಹಿಸಿರುವ ನಿವೇಶನದ ಹಣ ಎಷ್ಟು; (ಸದಸ್ಯರ ಹೆಸರು ಸಹಿತ ವಿವರ ನೀಡುವುದು) ಸಂಗ್ರಹಿಸಿರುವ ಒಟ್ಟು ಮೊತ್ತ ಎಷ್ಟು ;

(ಆ) ಅರ್ಜಿ ಸಲ್ಲಿಸಿದ ಸದಸ್ಯರ ಪೈಕಿ ಎಷ್ಟು ಸದಸ್ಯರಿಗೆ ಎಲ್ಲಿ ಮತ್ತು ಯಾವಾಗ ನಿವೇಶನ ಹಂಚಿಕೆ ಮಾಡಲಾಗಿದೆ ; ಸದಸ್ಯರಲ್ಲದವರಿಗೆ ನಿವೇಶನ ಹಂಚಿಕೆ ಆಗಿದೆಯೇ ; (ವಿವರ ನೀಡುವುದು)

ಸದಸ್ಯರಲ್ಲದವರಿಗೆ ಯಾವ ಮಾನದಂಡದ ಆಧಾರದ ಮೇಲೆ ನಿವೇಶನ ಹಂಚಿಕೆ ಮಾಡಲಾಗಿದೆ ;

(ಇ) ಸಂಘವು ಬಡಾವಣೆ ನಿರ್ಮಾಣ ಮಾಡುವ ಸಂಬಂಧ ಯಾವ ಡೆವಲಪರ್ ಜೊತೆ ಒಡಂಬಡಿಕೆ ಮಾಡಿಕೊಂಡಿದೆ ; ಸದರಿ ಡೆವಲಪರ್‌ಗೆ ಯಾವಾಗ ಎಷ್ಟು ಹಣ ನೀಡಲಾಗಿದೆ ;

(ಈ) ಡೆವಲಪರ್ ಒಡಂಬಡಿಕೆ ಅನ್ವಯ ಸಂಘಕ್ಕೆ ನಿವೇಶನಗಳನ್ನು ಹಸ್ತಾಂತರ ಮಾಡಿದ್ದಾರೆಯೇ: ಎಷ್ಟು ನಿವೇಶನಗಳನ್ನು ಯಾವಾಗ ಹಸ್ತಾಂತರ ಮಾಡಿರುತ್ತಾರೆ ;

(ಉ) ಒಡಂಬಡಿಕೆ ಅನ್ವಯ ನಿವೇಶನ ಹಸ್ತಾಂತರ ಮಾಡದ ಡೆವಲಪರ್ ವಿರುದ್ಧ ಸಂಘವು ದೂರು ದಾಖಲಿಸಿದೆಯೇ ; ಇಲ್ಲದೇ ಇದ್ದಲ್ಲಿ, ಕಾರಣಗಳೇನು ?

## ಗರಿಷ್ಠ ವಯೋಮಿತಿ ಹೆಚ್ಚಳ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೫೮ (೯೧೯) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ನಿ ಇಲ್ಲಿ ಸಹಾಯಕರ ಹುದ್ದೆಗೆ ಸರ್ಕಾರದ ನಿಯಮಗಳನ್ನು ಮೀರಿ ಅರ್ಜಿ ಅಹ್ವಾನಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಆ) ರಾಜ್ಯ ಸರ್ಕಾರವು ಗ್ರೂಪ್ "ಬಿ" ಮತ್ತು ಗ್ರೂಪ್ "ಸಿ" ಹುದ್ದೆಗಳಿಗೆ ಗರಿಷ್ಠ ವಯೋಮಿತಿಯಲ್ಲಿ ೩ ವರ್ಷಗಳ ಸಡಿಲಿಕೆಯನ್ನು ನೀಡಿ ಆದೇಶ ಹೊರಡಿಸಿದರೂ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್

ನಿಯಮಿತ ಇಲ್ಲಿ ಸಹಾಯಕರ ಹುದ್ದೆಗೆ ಹೊರಡಿಸಲಾದ ಪ್ರಕಟಣೆಯಲ್ಲಿ ಈ ಅಂಶವನ್ನು ಪರಿಗಣಿಸದೆ ಅಧಿಸೂಚನೆ ಹೊರಡಿಸಿರುವ ಬಗ್ಗೆ ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಇ) ಈಗಾಗಲೇ ಹೊರಡಿಸಿರುವ ಪ್ರಕಟಣೆಯನ್ನು ಹಿಂಪಡೆದು ಹೊಸದಾಗಿ ಸಹಾಯಕರ ಹುದ್ದೆಗೆ ಪ್ರಕಟಣೆ ಹೊರಡಿಸಲು ಆದೇಶ ನೀಡುವ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಯಶಸ್ವಿನಿ ವಿಮಾ ಯೋಜನೆಯ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೫೯ (೯೯೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಯಶಸ್ವಿನಿ ಆರೋಗ್ಯ ವಿಮಾ ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಯೋಜನೆಯಡಿಯಲ್ಲಿ ನೋಂದಾಯಿತ ಆಸ್ಪತ್ರೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸದರಿ ಯೋಜನೆಯ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ನೂತನವಾಗಿ ನೋಂದಾಯಿಸಲು ಅವಕಾಶವಿದೆಯೇ ; ಇಲ್ಲದಿದ್ದಲ್ಲಿ, ಮತ್ತೆ ಅವಕಾಶ ಕಲ್ಪಿಸದೆ ಇರುವುದಕ್ಕೆ ಕಾರಣವೇನು ? (ಮಾಹಿತಿ ನೀಡುವುದು)

# ಮರಳು ಗಣಿಗಾರಿಕೆಯ ಗುತ್ತಿಗೆ ಪರವಾನಿಗೆ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೬೦ (೯೮೯) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಗಣಿಗಾರಿಕೆ ನಡೆಸುತ್ತಿರುವ ಕಂಪನಿಗಳು ಯಾವುವು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸರ್ಕಾರದ ಅನುಮತಿ ಪಡೆಯದೆ ಅನಧಿಕೃತವಾಗಿ ನಡೆಸುತ್ತಿರುವ ಗಣಿಗಾರಿಕೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಗಣಿಗಾರಿಕೆಗಳು ಅಕ್ರಮವಾಗಿ ನಡೆಯುತ್ತಿದೆ ; ಅಕ್ರಮ ಗಣಿಗಾರಿಕೆ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕಲ್ಲು ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು) ಅಕ್ರಮ ಗಣಿಗಾರಿಕೆಯಿಂದ ಸರ್ಕಾರಕ್ಕೆ ಆಗುವ ನಷ್ಟ ಎಷ್ಟು ;

(ಈ) ಖಾಸಗಿ ಪಟ್ಟ ಲ್ಯಾಂಡ್ ಜಾಗದಲ್ಲಿ ಗುತ್ತಿಗೆ ಆಧಾರದಲ್ಲಿ ಪರವಾನಿಗೆ ಪಡೆದು ಮರಳು ಗಣಿಗಾರಿಕೆ ಮಾಡುತ್ತಿರುವವರು ಕನಿಷ್ಠ ಮರಳು ತೆಗೆಯದೆ ಹಾಗೆ ಉಳಿದಿದ್ದವರಿಗೆ ಅವಧಿ ಮುಗಿದ ಮೇಲೆ ಪರವಾನಿಗೆ ನೀಡಲು ಒಂದು ವರ್ಷ ಮುಂದೂಡಲು ಅವಕಾಶವಿದೆಯೇ ; ಇಲ್ಲವಾದಲ್ಲಿ ಕಾರಣವೇನು ;

(ಉ) ಪಟ್ಟ ಲ್ಯಾಂಡ್‌ನಲ್ಲಿ ಪರವಾನಿಗೆಯನ್ನು ೫ ವರ್ಷಗಳು ಹಾಗೂ ಇನ್ನುಳಿದ ಜಾಗಗಳಿಗೆ ೩೦ ವರ್ಷಗಳ ಪರವಾನಿಗೆಯನ್ನು ನೀಡಿದ್ದು, ಪಟ್ಟಲ್ಯಾಂಡ್ ಜಮೀನಿಗೆ ೩೦ ವರ್ಷಗಳ ಪರವಾನಿಗೆಯನ್ನು ನೀಡದಿರಲು ಕಾರಣವೇನು ?

## ನಗರಾಭಿವೃದ್ಧಿ ಇಲಾಖೆಯ ಅನುದಾನಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೬೧ (೯೯೦) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ ಜಿಲ್ಲೆಗಳಲ್ಲಿ ೨೦೨೨ರಿಂದ ೨೦೨೪ರವರೆಗೆ ಸರ್ಕಾರ ಮತ್ತು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು ;

(ಆ) ಬಿಡುಗಡೆಯಾದ ಅನುದಾನದಲ್ಲಿ ನಡೆದ ಕಾಮಗಾರಿಗಳಾವುವು ; (ಕಾಮಗಾರಿಗಳವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಇ) ಬಿಡುಗಡೆಯಾದ ಅನುದಾನದಲ್ಲಿ ಬಳಕೆಯಾಗದೆ ಉಳಿದಿರುವ ಅನುದಾನ ಎಷ್ಟು ;

(ಈ) ಕಲಬುರಗಿ, ರಾಯಚೂರು, ಬಳ್ಳಾರಿ, ಕೊಪ್ಪಳ, ಬೀದರ್, ವಿಜಯಪುರ, ಯಾದಗಿರಿ, ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ (ಜಿಲ್ಲಾ ಕೇಂದ್ರ ಡೆವಲಪ್‌ಮೆಂಟ್ ಅಥಾರಿಟಿ) (ನಗರ ಪ್ಲಾನಿಂಗ್ ಅಥಾರಿಟಿ ಹೊರತುಪಡಿಸಿ) ೩ ವರ್ಷಗಳಲ್ಲಿ ಎಷ್ಟು ಬಡಾವಣೆಗಳಿಗೆ ಅನುಮತಿ ನೀಡಲಾಗಿದೆ ; (ಸರ್ವೆ ನಂಬರ್, ಭೂ ಮಾಲೀಕರ ಹೆಸರು ಸಹಿತ ಸಂಪೂರ್ಣ ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವಂತಹ ಸರ್ಕಾರದ ಆಸ್ತಿಗಳು ಯಾವುವು ; ಸದರಿ ಈ ಆಸ್ತಿಗಳನ್ನು ಯಾವ ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಭಿವೃದ್ಧಿ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೬೨ (೯೯೨) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ನಗರ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹೆಚ್ಚಿಸಲು ಚಿಂತಿಸಿದೆಯೇ ;

(ಇ) ರಾಜ್ಯದಲ್ಲಿ ಇರುವ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಕಳೆದ ೩ ವರ್ಷಗಳಲ್ಲಿ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ;

(ಈ) ಕಲಬುರಗಿ ನಗರಕ್ಕೆ ನೀರು ಸರಬರಾಜು ಮಾಡುವ ಮೂಲಗಳಾವುವು ; ಈ ಮೂಲಗಳಿಂದ ಎಷ್ಟು ಪ್ರಮಾಣದಲ್ಲಿ ನೀರು ಸರಬರಾಜು ಆಗುತ್ತಿದೆ ;

(ಉ) ಮುಂದಿನ ದಿನಗಳಲ್ಲಿ ಯಾವ ನಗರವನ್ನು ನಗರಾಭಿವೃದ್ಧಿ ಪ್ರಾಧಿಕಾರವನ್ನಾಗಿ ಮಾಡಲು ಸರ್ಕಾರ ನಿರ್ಧರಿಸಿದೆ ?

## ಕೈಗಾರಿಕೆ ಘಟಕಗಳ ಕುರಿತು

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು):-**

೮೬೩ (೯೯೮) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕೆ ಸ್ಥಾಪನೆ ಉದ್ದೇಶಕ್ಕಾಗಿ ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ;

(ಆ) ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆಯೇ ;

(ಇ) ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಕೆ.ಐ.ಎ.ಡಿ.ಬಿ.ಯು ಹಣ ಪಾವತಿಸಿಕೊಂಡು ಎಷ್ಟು ಖಾಸಗಿ ಸಂಸ್ಥೆಗಳಿಗೆ ಜಮೀನು ಹಂಚಿಕೆ ಮಾಡಲಾಗಿದೆ ? (ವಿವರ ನೀಡುವುದು)

## ಕೆ.ಟಿ.ಸಿ.ಪಿ. ಕಾಯ್ದೆ ೨೦೧೫ರ ಕಲಂ ೧೭ರ ತಿದ್ದುಪಡಿ ಅನುಷ್ಠಾನದ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು):-**

೮೬೪ (೯೩೭) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಟಿ.ಸಿ.ಪಿ. ಕಾಯ್ದೆ ೨೦೧೫ರ ಕಲಂ ೧೭ನ್ನು ಯಾವಾಗ ತಿದ್ದುಪಡಿ ಮಾಡಲಾಯಿತು ; ಹಾಗೂ ಪರಿಷ್ಕೃತ ನಿಯಮಗಳ ಅಧಿಸೂಚನೆಯನ್ನು ಯಾವ ವರ್ಷದಲ್ಲಿ ಅಂತಿಮಗೊಳಿಸಲಾಗಿದೆ ;

(ಆ) ರಾಜ್ಯದ ಯೋಜನಾ ಪ್ರಾಧಿಕಾರಗಳು, ಪೌರ ಸಂಸ್ಥೆಗಳ/ಗ್ರಾಮ ಪಂಚಾಯಿತಿಗಳು, ಸ್ಥಳೀಯ ಯೋಜನಾ ಪ್ರದೇಶದಲ್ಲಿ ತಮಗೆ ತೋಚಿದ ರೀತಿ ವಿನ್ಯಾಸಗಳನ್ನು ಅನುಮೋದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಹಾಗೂ ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳಾವುವು ; (ವಿವರ ನೀಡುವುದು)

(ಈ) ಕೆ.ಟಿ.ಸಿ.ಪಿ. ಕಾಯ್ದೆ ೨೦೧೫ರ ಕಲಂ ೧೭ಕ್ಕೆ ಪರಿಷ್ಕೃತ ನಿಯಮಗಳನ್ನು ಅಧಿಸೂಚಿಸದೇ ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು ; ಮತ್ತು ಯಾವ ಕಾಲಮಿತಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯ ಸಣ್ಣ ಕೈಗಾರಿಕೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೮೭೫ (೯೮೭) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳಿವೆ ; (ತಾಲ್ಲೂಕುವಾರು, ಕೈಗಾರಿಕೆಗಳ ಮಾಹಿತಿ ನೀಡುವುದು)

(ಆ) ಈ ಭಾಗದ ವಿದ್ಯಾವಂತರು ಉದ್ಯೋಗ ಅರಸಿ ಬೇರೆ ಬೇರೆ ಜಿಲ್ಲೆಗಳಿಗೆ ಹೋಗುವುದನ್ನು ತಪ್ಪಿಸಲು ಉದ್ಯೋಗ ಸೃಷ್ಟಿಸಲು ಗಾರ್ಮೆಂಟ್ಸ್ ನಂತಹ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಚನೆ ಸರ್ಕಾರಕ್ಕೆ ಇದೆಯೇ ;

(ಇ) ಸಣ್ಣ ಕೈಗಾರಿಕೆಗಳ ಉತ್ತೇಜನಗಳಿಗಾಗಿ ಸರ್ಕಾರದ ಕ್ರಮಗಳೇನು ? (ಸಂಪೂರ್ಣವಾಗಿ ವಿವರ ನೀಡುವುದು)

## ಸಣ್ಣ ಕೈಗಾರಿಕೆಯಲ್ಲಿ **SEP/TSP** ನಿಯಮ ಪಾಲಿಸುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :-**

೮೬೬ (೯೮೮) ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸಣ್ಣ ಕೈಗಾರಿಕೆಗಳಲ್ಲಿ SEP/TSP ನಿಯಮಗಳನ್ನು ಸಮರ್ಪಕವಾಗಿ ಪಾಲಿಸಲಾಗುತ್ತಿದೆಯೇ ;

(ಆ) ವಾಣಿಜ್ಯ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಇರುವ SEP/TSP ನೀತಿಗಳು ಯಾವುವು ? (ಸಂಪೂರ್ಣ ವಿವರ ನೀಡುವುದು)

## ಕೈಗಾರಿಕಾ ನೀತಿಯಿಂದಾಗಿ ರಾಜ್ಯದಲ್ಲಿ ಹಂಚಿಕೆಯಾಗಿರುವ ಬಂಡವಾಳದ ಕುರಿತು

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೭ (೯೫೪) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದ ಕೈಗಾರಿಕಾ ನೀತಿ ೨೦೨೦-೨೫ರ ಮುಖ್ಯ ಉದ್ದೇಶಗಳು ಯಾವುವು ಮತ್ತು ಈ ಉದ್ದೇಶಗಳಿಗೆ ಅನುಗುಣವಾಗಿ ರಾಜ್ಯದಲ್ಲಿ ೫೦ ಲಕ್ಷ ಉದ್ಯೋಗಗಳು ಹಾಗೂ ರಾಜ್ಯದ ಅಭಿವೃದ್ಧಿ ಶೇಕಡ ೧೦% ರಷ್ಟು ಅಭಿವೃದ್ಧಿಯಾಗಬೇಕಾಗಿದ್ದು, ಈ ಮೂಲಕ ಉದ್ದೇಶ ಈಡೇರಿದೆಯೇ ; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ೨೦೦೨ ರಿಂದ ಈವರೆಗೆ ಎಷ್ಟು ಬಾರಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಮತ್ತು ಈ

ಸಮಾವೇಶಗಳಿಗೆ ಸರ್ಕಾರವು ಖರ್ಚು ಮಾಡಿರುವ ಮೊತ್ತವೆಷ್ಟು; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಈವರೆಗೆ ಈ ಸಮಾವೇಶಗಳಿಂದ ಎಷ್ಟು ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿದೆ ; (ವರ್ಷವಾರು/ಸಮಾವೇಶವಾರು ವಿವರಗಳನ್ನು ಒದಗಿಸುವುದು)

(ಈ) ರಾಜ್ಯದಲ್ಲಿ ಕೈಗಾರಿಕಾ ನೀತಿ ಅನುಷ್ಠಾನದ ನಂತರ ವಲಯವಾರು ಎಷ್ಟು ಹೊಸ ಕೈಗಾರಿಕೆಗಳು ಸ್ಥಾಪನೆಗೊಂಡಿವೆ ; ರಾಜ್ಯದಲ್ಲಿ ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಉ) ರಾಜ್ಯದಲ್ಲಿ ಪ್ರಮುಖ ಕ್ಷೇತ್ರಗಳಾದ ಆಟೋಮೊಬೈಲ್, ಆಟೋ ಕಾಂಪೋನೆಂಟ್ಸ್, ಎಲೆಕ್ಟ್ರಿಕಲ್ ವಾಹನಗಳು, ಫಾರ್ಮಸಿಟಿಕಲ್ಸ್, ಮೆಡಿಕಲ್ ಡಿವೈಸಸ್, ಇಂಜಿನಿಯರಿಂಗ್, ಮಷೀನ್ ಟೂಲ್ಸ್, ಲಾಜಿಸ್ಟಿಕ್ಸ್, ಏರೋ ಸ್ಪೇಸ್ ನವೀಕರಿಸಬಹುದಾದ ಇಂಧನ ಮತ್ತು ರಕ್ಷಣಾ ವಲಯದ ಕೈಗಾರಿಕೆಗಳು ಎಷ್ಟು ಸ್ಥಾಪನೆಗೊಂಡಿವೆ ; ಮತ್ತು ಯಾವ-ಯಾವ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡಿವೆ ? (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

## ಕೇಂದ್ರ ಪುರಸ್ಕೃತ ನಗರ ಮೂಲಸೌಕರ್ಯ ನಿಧಿಯ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೮ (೯೫೫) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯ ಸರ್ಕಾರ ಕೇಂದ್ರ ಪುರಸ್ಕೃತ ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ ಯೋಜನೆ ಅಡಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳು ಯಾವುವು ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಈ ನಿಧಿ ಅಡಿಯಲ್ಲಿ ನೀಡಿರುವ ಮಾರ್ಗ ಸೂಚಿಯಂತೆ ರಾಜ್ಯದ ಯಾವ ನಗರಗಳನ್ನು ಅಭಿವೃದ್ಧಿಗಾಗಿ ಗುರುತಿಸಲಾಗಿದೆ ; ಮತ್ತು ಈ ನಗರಗಳಲ್ಲಿ ಯಾವ ಯಾವ ಮೂಲಸೌಕರ್ಯಗಳನ್ನು ಕಲ್ಪಿಸುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯ ಸರ್ಕಾರ ಈ ಯೋಜನೆ ಅಡಿಯಲ್ಲಿ ಇದುವರೆಗೂ ವ್ಯಯಿಸಿರುವ ಮೊತ್ತವೆಷ್ಟು ; ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲು ಎಷ್ಟು ? (ಪೂರ್ಣ ಮಾಹಿತಿ ನೀಡುವುದು)

## ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಕಾರ್ಯವೈಖರಿಗಳ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೬೬ (೯೫೬) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ; (ಪೂರ್ಣ ವಿವರ ನೀಡುವುದು)

(ಆ) ರಾಜ್ಯದಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳೆಂದು ನೋಂದಾಯಿಸಿರುವ ಉದ್ಯಮಗಳು ಎಷ್ಟು; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

(ಇ) ಈ ಉದ್ಯಮಗಳ ನಿರ್ವಹಣೆ, ಮೇಲ್ವಿಚಾರಣೆ ಮತ್ತು ಪ್ರೋತ್ಸಾಹಗಳಿಗೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಇಲಾಖೆ/ನಿಗಮ/ಮಂಡಳಿಗಳು ಯಾವುವು; ಮತ್ತು ಅವುಗಳ ಕಾರ್ಯ ವೈಖರಿಗಳೇನು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಈ) ರಾಜ್ಯದಲ್ಲಿ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಪ್ರೋತ್ಸಾಹಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಯಾವುವು; ಈ ಯೋಜನೆಗಳ ಅಡಿಯಲ್ಲಿ ಉದ್ಯಮಗಳಿಗೆ ಲಭ್ಯವಾಗುತ್ತಿರುವ ಆರ್ಥಿಕ ನೆರವುಗಳು ಯಾವುವು; ಮತ್ತು ಈ ಉದ್ಯಮಗಳಿಗೆ ಕಳೆದ ೦೩ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆತಿರುವ ಆರ್ಥಿಕ ನೆರವು ಎಷ್ಟು; ಈ ರೀತಿ ನೆರವಿನಿಂದ ಎಷ್ಟು ಉದ್ಯಮಗಳನ್ನು ಪುನಃಶ್ಚೇತನಗೊಳಿಸಲಾಗಿದೆ; (ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ ನೀಡುವುದು)

(ಉ) ದೇಶದಲ್ಲಿ ಜಿ.ಎಸ್.ಟಿ. ಜಾರಿಗೆ ಬಂದ ನಂತರ, ವ್ಯವಹಾರಗಳು ಆನ್‌ಲೈನ್ ಮುಖಾಂತರ ನಡೆಯಲು ಪ್ರಾರಂಭವಾಗಿದ್ದು, ಕೊರೋನಾ ಸಮಯದ ಲಾಕ್‌ಡಾನ್‌ನಿಂದ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳು ಸಂಕಷ್ಟ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಸಂಕಷ್ಟ ಮತ್ತು ಸಮಸ್ಯೆಗಳನ್ನು ಬಗೆಹರಿಸಲು ಈ ಉದ್ಯಮಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಡಿಜಿಟಲೀಕರಣಗೊಳಿಸುವ ಅನುಷ್ಠಾನದ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-**

೮೭೦ (೯೫೭) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಡಿಜಿಟಲೀಕರಣಗೊಳಿಸುವ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆಯೇ ; ಹಾಗಿದ್ದಲ್ಲಿ, ಈ ಯೋಜನೆಯ ರೂಪ-ರೇಷೆಗಳು ಯಾವುವು ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಇದುವರೆಗೂ ದೊರೆತಿರುವ ಅನುದಾನವೆಷ್ಟು ; ಮತ್ತು ರಾಜ್ಯದಲ್ಲಿ ಇದುವರೆಗೂ ಎಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಿಗೆ ಪರಿವರ್ತಿಸಲಾಗಿದೆ ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆ ಅಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ನೀಡುತ್ತಿರುವ ಸೇವೆಗಳು ಯಾವುವು ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಯೋಜನೆ ಅಡಿ ನಬಾರ್ಡ್‌ನಿಂದ ದೊರೆಯುವ ಸಾಲ-ಸೌಲಭ್ಯಗಳು ರಾಜ್ಯ ಸಹಕಾರಿ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳೊಂದಿಗೆ ಜೋಡಿಸಿ, ಪ್ರಾಥಮಿಕ ಸಹಕಾರ ಸಂಘಗಳನ್ನು ಸಮ್ಮಿಲನ ಮಾಡಲು ಉಪಯೋಗಿಸುತ್ತಿರುವ ತಂತ್ರಾಂಶಗಳು ಯಾವುವು ? (ಪೂರ್ಣ ಮಾಹಿತಿ ನೀಡುವುದು)

## ಸಹಕಾರ ಸಂಘಗಳ ಬೈಲಾ ತಿದ್ದುಪಡಿಗೆ ಸಂಬಂಧಿಸಿದ ಪ್ರಶ್ನೆಗಳು

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) :-**

೮೭೧ (೮೯೮) ಮಾನ್ಯ ಸಹಾಕರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಹಕಾರ ಸಂಘಗಳ ಬೈಲಾ ತಿದ್ದುಪಡಿಗೆ ಇರುವ ಮಾನದಂಡಗಳೇನು ;

(ಆ) ಒಂದು ಅರ್ಬನ್ ಕೋ–ಆಪ್ ಕ್ರೆಡಿಟ್ ಸೊಸೈಟಿಯನ್ನು ಬೈಲಾ ತಿದ್ದುಪಡಿ ಮಾಡಿ ವಿವಿಧ ಉದ್ದೇಶಗಳ ಸಹಕಾರಿ ಸಂಘ ಎಂದು ಅನುಮತಿ ನೀಡಲು ಇರುವ ಮಾನದಂಡಗಳೇನು ;

(ಇ) ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ ಪ್ರಕರಣಗಳಿಗೆ ಉದ್ದೇಶ ಪೂರ್ವಕವಾಗಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು ;

(ಈ) ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ೧೯೫೯ ರ ಪ್ರಕಾರ ; ಬೈಲಾ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸಿದ ೩ ತಿಂಗಳ ಅವಧಿಯೊಳಗೆ ಸಹಕಾರ ಸಂಘಗಳ ನಿಬಂಧಕರು ಅನುಮೋದನೆ ನೀಡಬೇಕಿರುವುದು ಕಡ್ಡಾಯವೆ ;

(ಉ) ಸಹಕಾರ ಸಂಘಗಳ ನಿಬಂಧಕರು ನಿರ್ದಿಷ್ಟ ಅವಧಿಯೊಳಗೆ ಬೈಲಾ ತಿದ್ದುಪಡಿಗೆ ಅನುಮೋದನೆ ನೀಡದಿದ್ದರೆ, ಆ ಒಂದು ಸಹಕಾರಿ ಸಂಘದ ಬೈಲಾ ತನ್ನಷ್ಟಕ್ಕೆ ತಾನೆ ಅನುಮೋದನೆ ಸಿಕ್ಕಂತೆ (Bye it is deemed to be automatically approved) ಎನ್ನುವುದಕ್ಕೆ ಸರ್ಕಾರದ ಸ್ಪಷ್ಟನೆ ಏನು ? (ಸ್ಪಷ್ಟೀಕರಣ ನೀಡುವುದು)

## ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಕುರಿತು

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) :-**

೮೭೨ (೮೯೯) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಸೌಹಾರ್ದ ಕ್ರೆಡಿಟ್ ಕೋ-ಆಪ್‌ರೇಟಿವ್ ಸೊಸೈಟಿಗಳು ನೋಂದಾಣಿಯಾಗಿದೆ ; ಎಷ್ಟು ಸೌಹಾರ್ದ ಸೊಸೈಟಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ ;

(ಆ) ಎಷ್ಟು ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿದೆ ; ನಡೆದಿದ್ದರೆ ಒಟ್ಟಾರೆ ಎಷ್ಟು ಹಣ, ಅವುಗಳ ಹೆಸರು ಎಷ್ಟು ಹಣ ದುರುಪಯೋಗವಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡುವುದು

(ಇ) ಈವರೆಗೆ ಸೌಹಾರ್ದ ಕಾಯಿದೆ ಸೆಕ್ಷನ್ ೩೫ ರಲ್ಲಿ ಎಷ್ಟು ಸಂಸ್ಥೆಗಳ ಮೇಲೆ ತನಿಖೆಯಾಗಿದೆ ; ಎಷ್ಟು ವಸೂಲಿ ಆಗಿದೆ ; ತಪ್ಪಿತಸ್ಥರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಸರ್ಕಾರದ ಒಡೆತನದಲ್ಲಿ ಇರುವ ಕ್ರೆಡಿಟ್ ಸೊಸೈಟಿ/ ಬ್ಯಾಂಕುಗಳಲ್ಲಿಯೇ ಅವ್ಯವಹಾರ ಆಗುತ್ತಿದ್ದು, ಸರ್ಕಾರದ ನಿಯಂತ್ರಣ ಇಲ್ಲದ ಸೌಹಾರ್ದ ಸೊಸೈಟಿಗಳಲ್ಲಿ ಅವ್ಯವಹಾರ ತಡೆಯುವುದು ಸಾಧ್ಯವೇ ;

(ಉ) ಸರ್ಕಾರದ ಅಧೀನದಲ್ಲಿ ಇರುವ ಸಹಕಾರಿ ಸಂಸ್ಥೆಗಳು ಉತ್ತಮ ಕೆಲಸ ಮಾಡುತ್ತಿರುವಾಗ ಸಾರ್ವಜನಿಕರ ದುಡ್ಡನ್ನು ದುರುಪಯೋಗ ನಡೆಸುತ್ತಿರುವ ಖಾಸಗಿ ಸೌಹಾರ್ದದ ಸೊಸೈಟಿಗಳ ಅವಶ್ಯಕತೆ ಇದೆಯೇ ? (ವಿವರಿಸುವುದು)

## ಮೈಸೂರು ಮಹಾನಗರ ಅಭಿವೃದ್ಧಿ ಕಾಮಗಾರಿಗಳ ಕುರಿತು

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :-**

೮೭೩ (೯೨೬) ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರವು ಮೈಸೂರು ಮಹಾನಗರ ಪಾಲಿಕೆಗೆ ೨೦೨೩ ರಿಂದ ೨೦೨೪ನೇ ಸಾಲಿನವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನೀಡಿರುವ ಅನುದಾನಗಳು ಎಷ್ಟು; (ವಾರ್ಡ್‌ವಾರು ಪೂರ್ಣ ಮಾಹಿತಿ ನೀಡುವುದು)

(ಆ) ಮೈಸೂರು ಮಹಾನಗರವು ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿರುವುದರಿಂದ ಜನಸಂಖ್ಯೆ ದಿನೇ ದಿನೇ ಹೆಚ್ಚಳವಾಗುತ್ತಿರುವುದರಿಂದ, ಇವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಇನ್ನೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಯಾವ ಕ್ರಮಗಳನ್ನು ಕೈಗೊಂಡಿದೆ ?

## ಕೊಂಕಣ ರೈಲ್ವೆಯನ್ನು ವಿಲೀನಗೊಳಿಸುವ ಪ್ರಸ್ತಾವನೆ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೪ (೯೫೮) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಂಕಣ ರೈಲ್ವೆ ಕಾರ್ಪೊರೇಷನ್‌ಲ್ಲಿ ರಾಜ್ಯ ಸರ್ಕಾರ ಹೊಂದಿರುವ ಪಾಲೆಷ್ಟು; ಇದರಿಂದ ಪ್ರತಿ ವರ್ಷ ರಾಜ್ಯಕ್ಕೆ ಬರುತ್ತಿರುವ ಆದಾಯ

ಎಷ್ಟು ; ಈವರೆಗೆ ಬಂದಿರುವ ಆದಾಯ ಎಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಕೇಂದ್ರ ಸರ್ಕಾರವು ಕೊಂಕಣ ರೈಲ್ವೆಯನ್ನು ಭಾರತೀಯ ರೈಲ್ವೆಯೊಂದಿಗೆ ವಿಲೀನಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆಯೇ ;

(ಇ) ಒಪ್ಪಿಗೆ ನೀಡದಿದ್ದಲ್ಲಿ, ಕಾರಣಗಳೇನು ; ಈ ಪ್ರಸ್ತಾವನೆ ಕುರಿತು ರಾಜ್ಯ ಸರ್ಕಾರದ ನಿಲುವೇನು ?

## ವಿವಿಧ ವೃಂದದ ಹುದ್ದೆಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೭೫ (೮೯೭) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಪಟ್ಟಣ ಪಂಚಾಯತ್, ಪುರಸಭೆ ಮತ್ತು ನಗರ ಸಭೆಗಳಿಗೆ ಮಂಜೂರಾದ ವಿವಿಧ ವೃಂದದ ಸರ್ಕಾರಿ ಹುದ್ದೆಗಳು ಎಷ್ಟು ; ಪ್ರಸ್ತುತ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು ;

(ಆ) ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕ ಸೇವೆಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಇ) ಈ ಖಾಲಿ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

# ಖಾಸಗಿ ಫೈನಾನ್ಸ್ ಕಂಪನಿಗಳು ಸಾರ್ವಜನಿಕರಿಗೆ ವಂಚನೆ ಮಾಡುತ್ತಿರುವ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೭೬ (೯೭೧) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಖಾಸಗಿ ಫೈನಾನ್ಸ್ ಕಂಪನಿಗಳು ಸಾರ್ವಜನಿಕರಿಗೆ ವೈಯಕ್ತಿಕ ಸಾಲ ಮತ್ತು ಇತರೇ ಸಾಲ ಸೌಲಭ್ಯ ಒದಗಿಸಲು ಸರ್ಕಾರದಿಂದ ಮಾರ್ಗಸೂಚಿ/ಮಾನದಂಡಗಳನ್ನು ನೀಡಲಾಗಿದೆಯೇ ; (ಹೌದಾದಲ್ಲಿ ಅದರ ಸಂಪೂರ್ಣ ವಿವರ ಒದಗಿಸುವುದು)

(ಆ) ಖಾಸಗಿ ಫೈನಾನ್ಸ್ ಕಂಪನಿಗಳು ಸಾರ್ವಜನಿಕರಿಂದ ವೈಯಕ್ತಿಕ ಸಾಲ ಮತ್ತು ಇತರೇ ಸಾಲಗಳ ಮೇಲೆ ಅಧಿಕ ಬಡ್ಡಿದರಗಳನ್ನು ವಿಧಿಸಿ ಸಾರ್ವಜನಿಕರನ್ನು ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹೌದಾದಲ್ಲಿ, ತೆಗೆದುಕೊಂಡಿರುವ ಕ್ರಮವೇನು ; ಇಲ್ಲದಿದ್ದಲ್ಲಿ, ಅಧಿಕ ಬಡ್ಡಿದರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದೇ ;

(ಇ) ಬಜಾಜ್ ಫೈನಾನ್ಸ್ ಎಂಬ ಖಾಸಗಿ ಕಂಪನಿಯುವರು ಸಾರ್ವಜನಿಕರಿಗೆ ಶೀಘ್ರವಾಗಿ/ಒಂದೇ ಕ್ಷಣದಲ್ಲಿ ವೈಯಕ್ತಿಕ ಸಾಲ ಮತ್ತು ಇತರೇ ಸಾಲಗಳನ್ನು ಕೊಡುವುದಾಗಿ ತಪ್ಪುದಾರಿಗೆ ತಂದು, ವೈಯಕ್ತಿಕ ಸಾಲದ ಮೇಲೆ ಶೇ.೨೪ರಷ್ಟು ಬಡ್ಡಿ ವಿಧಿಸಿ, ಸುಲಿಗೆ ಮಾಡುತ್ತಿದ್ದು, ಇದರ ನಿಯಂತ್ರಣಕ್ಕೆ ಸರ್ಕಾರವು ಗಮನಹರಿಸುವುದೇ ;

(ಈ) ಈ ರೀತಿಯಾಗಿ ಒದಗಿಸುವ ಸಾಲ ಸೌಲಭ್ಯಗಳ ಮೇಲೆ ಬೌನ್ಸ್ ಚಾರ್ಜಸ್, ಫಾಸ್ಟ್ ಫುಲ್ ಪೇಮೆಂಟ್ ಚಾರ್ಜಸ್ ಇತರೆ ಚಾರ್ಜಸ್ ಅನ್ನು ಬಡ ಅಮಾಯಕ ಜನರ ಮೇಲೆ ಹಾಕುತ್ತಿದ್ದು,

ಈ ರೀತಿಯಾಗಿ ಖಾಸಗಿ ಫೈನಾಸ್ಸ್ ಕಂಪನಿಗಳನ್ನು ಸಾರ್ವಜನಿಕರಿಂದ ಹಗಲು ದರೋಡೆ ಮಾಡುವುದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

(ಉ) ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ವಿಧಿಯಿಲ್ಲದೇ ಖಾಸಗಿ ಫೈನಾನ್ಸ್ ಕಂಪನಿಯಿಂದ ಸಾಲ ಪಡೆಯುತ್ತಿದ್ದು, ಸಾಮಾನ್ಯವಾಗಿ ಖಾಸಗಿ ಕಂಪನಿಯಲ್ಲಿನ ನೌಕರರಿಗೆ ವೇತನ ಪಾವತಿಸುವುದು ಪ್ರತಿ ತಿಂಗಳ ೧೦ನೇ ತಾರೀಖಿನ ನಂತರ, ಆದರೂ ಸಹ ಖಾಸಗಿ ಫೈನಾನ್ಸ್ ಕಂಪನಿಗಳು ೨ನೇ ತಾರೀಖಿನೊಳಗೆ ಬಡ್ಡಿದರವನ್ನು ಪಡೆಯುತ್ತಿದ್ದು ಪಾವತಿ ವಿಳಂಭವಾದರೆ ಪ್ರತಿ ದಿನಕ್ಕೆ ರೂ.೭೫೦/-ಗಳಂತೆ ದಂಡದ ಮೊತ್ತವನ್ನು ವಸೂಲಿ ಮಾಡುತ್ತಿದ್ದು ಇದರಿಂದ ಬಡ ನೌಕರರು ಆರ್ಥಿಕ ಮುಗ್ಗಟ್ಟನ್ನು ಅನುಭವಿಸುವಂತಾಗುತ್ತಿದ್ದು ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು ?

## ದಾವೋಸ್ ಒಡಂಬಡಿಕೆ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೭೭ (೧೦೦೦) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯಲ್ಲಿ ಸರ್ಕಾರವು ಯಾವ ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆಗೆ ಸಹಿ ಮಾಡಿದೆ ; (ವಿವರ ನೀಡುವುದು)

(ಆ) ಒಡಂಬಡಿಕೆ ದಿನಾಂಕ ಯಾವುದು ; ಈವರೆಗೆ ರಾಜ್ಯದ ಎಷ್ಟು ಹೂಡಿಕೆಯಾಗಿದೆ ; ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ; (ವಿವರ ಒದಗಿಸುವುದು)

(ಇ) ಪ್ರಸ್ತುತ ಸರ್ಕಾರ ಬಂದ ನಂತರ ಎಷ್ಟು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆಯಾಗಿದೆ ; ಎಷ್ಟು ಹೂಡಿಕೆಯಾಗಿದೆ ; ಎಷ್ಟು ಉದ್ಯೋಗ ಸೃಷ್ಟಿಯಾಗಿದೆ ?

## ಅನುದಾನ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೮ (೮೯೩) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ೩ ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಪೌರಾಡಳಿತ ಇಲಾಖೆಯಿಂದ ಬಿಡುಗಡೆಯಾದ ಅನುದಾನವೆಷ್ಟು ; ಈ ಅನುದಾನವನ್ನು ಯಾವ ಯಾವ ಕಾಮಗಾರಿಗೆ ನೀಡಲಾಗಿದೆ ; (ವಿವರ ನೀಡುವುದು)

(ಆ) ಅನುದಾನ ಬಿಡುಗಡೆಗೆ ಸದರಿ ಜಿಲ್ಲೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ ; ಬಂದಿದ್ದಲ್ಲಿ, ಯಾವ ಕಾಮಗಾರಿ ಕೈಗೊಳ್ಳಲು ಪ್ರಸ್ತಾವನೆ ಬಂದಿದೆ ? (ವಿವರ ಒದಗಿಸುವುದು)

## ಎಪಿಎಂಸಿ ಮಾರುಕಟ್ಟೆ ಸ್ಥಳಾಂತರ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೭೯ (೮೯೪) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆಯ ಎಪಿಎಂಸಿ ಮಾರುಕಟ್ಟೆ ಪ್ರಾಂಗಣದ ಜಾಗವು ಕಡಿಮೆ ಇರುವುದರಿಂದ ಮೂಲಸೌಲಭ್ಯ ಕೊರತೆಯಿಂದ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು, ಖರೀದಿಸಲು

ತೊಂದರೆಯಾಗುತ್ತಿರುವುದರಿಂದ ವಿಶಾಲ ಜಾಗಕ್ಕೆ ಎಪಿಎಂಸಿ ಮಾರುಕಟ್ಟೆ ಸ್ಥಳಾಂತರಕ್ಕೆ ಸರ್ಕಾರಕ್ಕೆ ಪ್ರಸ್ಥಾವನೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರವು ಈ ಎಪಿಎಂಸಿ ಮಾರುಕಟ್ಟೆ ಸ್ಥಳಾಂತರಕ್ಕೆ ಕೈಗೊಂಡ ಕ್ರಮವೇನು ? (ಮಾಹಿತಿ ನೀಡುವುದು)

## ಮಾಹಿತಿ ನೀಡಲು ವಿಳಂಬ ಧೋರಣೆ ತೋರುತ್ತಿರುವ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೦ (೮೯೫) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೀದರ್ ಜಿಲ್ಲೆ, ಹುಮ್ನಾಬಾದ್ ಪಟ್ಟಣದ ಸರ್ವೆ ನಂ:೪೭೪ರ ಕಟ್ಟಡ ಪರವಾನಿಗೆ ಮತ್ತು ಹಕ್ಕು ಬದಲಾವಣೆಯ ಅಧಿಕೃತ ಸಂಪೂರ್ಣ ದಾಖಲೆಗಳೊಂದಿಗೆ ಮಾಹಿತಿ ನೀಡಲು ಜಿಲ್ಲೆಯ ಸಂಬಂಧಪಟ್ಟ ಅಧಿಕಾರಿಗಳು ಮತ್ತು ತಾಲ್ಲೂಕು ಅಧಿಕಾರಿಗಳನ್ನು ಕೋರಿದ್ದು ಇಲ್ಲಿಯವರೆಗೆ ಮಾಹಿತಿಯನ್ನು ನೀಡದೇ ಇರಲು ಕಾರಣವೇನು ;

(ಆ) ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಆಸ್ತಿಯ ಈ ಬಗ್ಗೆ ಮಾಹಿತಿ ಕೋರಿದರೆ ಅಧಿಕಾರಿಗಳು ನಿಷ್ಕಾಳಜಿ ತೋರಿಸುತ್ತಿರುವುದು ಸರಿಯೇ ;

(ಇ) ಸರ್ವೆ ನಂ: ೪೭೪ರ ಪೂರ್ಣ ಮಾಹಿತಿಯನ್ನು ಅಧಿಕಾರಿಗಳು ನೀಡುವುದು ಯಾವಾಗ ; ನೀಡದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ನೀಡುವುದು; (ವಿವರ ಒದಗಿಸುವುದು)

(ಈ) ದಾಖಲೆ ನೀಡಲು ವಿಳಂಬ ಧೋರಣೆ ತೋರುತ್ತಿರುವ ಈ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು ?

# ಬೆಂಗಳೂರು ಉತ್ತರ ತಾಲ್ಲೂಕಿನ ಮಾದನಾಯಕನ ಹಳ್ಳಿ ಸಿಎಂಸಿ ವ್ಯಾಪ್ತಿಯಲ್ಲಿ ಉಲ್ಬಣಗೊಂಡಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೧ (೧೦೦೬) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಾದನಾಯಕನ ಹಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಸಮಸ್ಯೆ ಪರಿಹರಿಸಲು ನಗರ ಸಭೆ ಕೈಗೊಂಡಿರುವ ಕ್ರಮಗಳಾವುವು ; (ವಿವರ ನೀಡುವುದು)

(ಆ) ಪ್ರಸ್ತುತ ಎಷ್ಟು ದಿನಗಳಿಗೊಮ್ಮೆ ನೀರನ್ನು ಪೂರೈಸಲಾಗುತ್ತಿದೆ ; ಗ್ರಾಮಸ್ಥರು ಕುಡಿಯುವ ನೀರಿನ ದರವನ್ನು ಆಸ್ತಿ ತೆರಿಗೆಯಲ್ಲಿ ಪಾವತಿಸುತ್ತಿದ್ದಾರೆಯೇ ; ಯಾವ ಮಾನದಂಡದ ಮೇಲೆ ಎಷ್ಟೆಷ್ಟು ದರವನ್ನು ನಿಗದಿಪಡಿಸಲಾಗಿರುತ್ತದೆ ;

(ಇ) ಚಿಕ್ಕಬಿದರಕಲ್ಲು ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಮನವಿ ಮಾಡಿದ್ದರೂ ನೀರಿನ ಸಮಸ್ಯೆಯನ್ನು ಬಗೆಹರಿಸದಿರುವುದು ನಿಜವೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು ;

(ಈ) ಸದರಿ ಗ್ರಾಮದಲ್ಲಿ ಕೊಳವೆ ಬಾವಿಗಳಿಂದ ಉಪ್ಪಿನ ಅಂಶವನೊಳಗೊಂಡ ಅತ್ಯಂತ ಕಡಿಮೆ ಪ್ರಮಾಣ ನೀರನ್ನು ವಾರಕ್ಕೊಮ್ಮೆ ಪೂರೈಸುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಶುದ್ಧ ನೀರನ್ನು ಪೂರೈಸಲು ಕೈಗೊಳ್ಳುವ ಕ್ರಮಗಳೇನು ;

(ಉ) ಬೆಂಗಳೂರಿಗೆ ಸಮೀಪದ ಪರಿಮಿತಿಯಲ್ಲಿರುವ ಸದರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ಮತ್ತು ಯಾವ ಕಾಲಮಿತಿಯಲ್ಲಿ ಪರಿಹರಿಸಲಾಗುವುದು ? (ವಿವರ ನೀಡುವುದು)

## ಹಟ್ಟಿ ಚಿನ್ನದ ಗಣಿ ಬಗ್ಗೆ

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) :-**

೮೮೨ (೯೦೩) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ದಿನಾಂಕ: ೧೫.೦೩.೨೦೨೪ ರಂದು ಸ್ಥಳೀಯ ವೃಂದ ಮತ್ತು ಸ್ಥಳಿಯೇತರ ವೃಂದ ನೇಮಕಾತಿಗಾಗಿ ಅರ್ಜಿ ಕರೆದು ಇಲ್ಲಿಯವರೆಗೆ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದಲ್ಲಿ, ಈ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡುವುದು ಯಾವಾಗ ;

(ಇ) ಅಭ್ಯರ್ಥಿಗಳ ನೇಮಕಾತಿ ಆದೇಶ ಪತ್ರ ನೀಡುವುದು ?

## ಕಲಬುರಗಿ ಜಿಲ್ಲೆಯ ಸೇಡಂ, ಶಹಾಬಾದ್ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವಾಣಿಜ್ಯ ಮೂಲಗಳ ಆದಾಯದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೩ (೯೩೯) ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಜಿಲ್ಲೆಯ ಸೇಡಂ ಮತ್ತು ಶಹಾಬಾದ್ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಯೋಗ್ಯ ಆಸ್ತಿಗಳು ವಾಣಿಜ್ಯ ಆಸ್ತಿಗಳು ಕೈಗಾರಿಕೆಗಳು ಹಾಗೂ ಖಾಲಿ ಇರುವ ನಿವೇಶನಗಳ ಸಂಖ್ಯೆ ಎಷ್ಟು ; ಕಳೆದ ೦೫ ವರ್ಷಗಳಿಂದ ನಗರಸಭೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಬಂದ ಆದಾಯ ಎಷ್ಟು ;

(ಆ) ಆಸ್ತಿ ತೆರಿಗೆಯನ್ನು ನೋಂದಣಿ ಮತ್ತು ಮುದ್ರಾಂಕ ಕಾಯ್ದೆ ೪೫ ಬಿ ರಂತೆ ೨೦೧೯ ರಿಂದ ೨೦೨೪ ನವೆಂಬರ್ ರವರೆಗೆ ಪರಿಷ್ಕರಿಸಲಾದ ಶೇಕಡವಾರು ತೆರಿಗೆ ಎಷ್ಟು ; ಇದರಿಂದ ಬಂದ ಆದಾಯವೆಷ್ಟು ; (ವಾರ್ಷಿಕವಾರು ವಿವರ ನೀಡುವುದು)

(ಇ) ವಾಣಿಜ್ಯ ಮೂಲಗಳಾದ ಮಳಿಗೆಗಳು ಜಾಹೀರಾತು ಪ್ರಕಟಣೆ ಉದ್ದಿಮೆ ಪರವಾನಿಗೆ ಹಾಗೂ ನಲ್ಲಿ ನೀರಿಗೆ ವಿಧಿಸುವ ತೆರಿಗೆ ಎಷ್ಟು ; ತೆರಿಗೆ ನಿಗಧಿಪಡಿಸಲು ಸರ್ಕಾರ ನಿಗಧಿ ಮಾಡಿರುವ ಮಾನದಂಡಗಳೇನು ; ಈ ಎಲ್ಲಾ ವಾಣಿಜ್ಯ ಮೂಲಗಳಿಂದ ೨೦೧೯ ರಿಂದ ೨೦೨೪ ನವೆಂಬರ್ ವರೆಗೆ ಸಂಗ್ರಹಿಸಲಾದ ಆದಾಯ ಎಷ್ಟು? (ವಿವರ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ "ಜಿಲ್ಲಾ ಖನಿಜ ನಿಧಿ"ಗೆ ಸಂಗ್ರಹವಾಗಿರುವ ನಿಧಿಯ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೮೮೪ (೯೪೦) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೫ ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಗಣಿಗಾರಿಕೆಯಿಂದ ಜಿಲ್ಲಾ ಖನಿಜ ನಿಧಿಗೆ ಸಂಗ್ರಹಣೆಯಾದ ಮೊತ್ತ ಎಷ್ಟು ;

(ಆ) ಸದರಿ ಜಿಲ್ಲೆಗಳಲ್ಲಿ ಗಣಿಗಾರಿಕೆಯಿಂದ ಬಾಧಿತ ಪ್ರದೇಶಗಳ ವಿಸ್ತೀರ್ಣವನ್ನು ಈ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕೈಗೊಂಡ ಕಾಮಗಾರಿಗಳಾವುವು ; ಇದಕ್ಕೆ ವಿನಿಯೋಗಿಸಿದ ಅನುದಾನ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಇ) ಜಿಲ್ಲಾ ಖನಿಜ ನಿಧಿಯಲ್ಲಿ ಸಂಗ್ರಹವಾದ ನಿಧಿಯನ್ನು ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆಯೇ ; ಹಾಗಿದ್ದಲ್ಲಿ, ಠೇವಣಿ ಮೊತ್ತವೆಷ್ಟು ; ಇದಕ್ಕೆ, ಬಂದ ಬಡ್ಡಿಯೆಷ್ಟು ; ಈ ಬಡ್ಡಿಯ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ? (ವರ್ಷವಾರು ವಿವರ ನೀಡುವುದು)

## ಕಲಬುರಗಿ ಮಹಾನಗರ ಪಾಲಿಕೆಗೆ ವಾಣಿಜ್ಯ ಮೂಲಗಳಿಂದ ಸಂಗ್ರಹವಾಗುತ್ತಿರುವ ಅದಾಯದ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೮೮೫ (೯೪೧) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಯೋಗ್ಯ ಆಸ್ತಿಗಳು, ವಾಣಿಜ್ಯ ಆಸ್ತಿಗಳು, ಕೈಗಾರಿಕೆಗಳು ಹಾಗೂ ಖಾಲಿ ಇರುವ ನಿವೇಶನಗಳ ಸಂಖ್ಯೆಯೆಷ್ಟು ; ಕಳೆದ ೦೫ ವರ್ಷಗಳಿಂದ ಪಾಲಿಕೆಗೆ ಬಂದ ಆದಾಯ ಎಷ್ಟು ;

(ಆ) ಆಸ್ತಿ ತೆರಿಗೆಯನ್ನು ನೋಂದಣಿ ಮತ್ತು ಮುದ್ರಾಂಕ ಕಾಯ್ದೆ ೪೫ ಬಿ ರಂತೆ ೨೦೧೯ ರಿಂದ ೨೦೨೪ ನವೆಂಬರ್ ವರೆಗೆ ಪರಿಷ್ಕರಿಸಲಾದ ಶೇಕಡವಾರು ತೆರಿಗೆ ಎಷ್ಟು ; ಇದರಿಂದ ಬಂದ ಆದಾಯವೆಷ್ಟು ; (ವಾರ್ಷಿಕವಾರು ವಿವರ ನೀಡುವುದು)

(ಇ) ವಾಣಿಜ್ಯ ಮೂಲಗಳಾದ ಮಳಿಗೆಗಳು ಜಾಹೀರಾತು ಪ್ರಕಟಣೆ, ಉದ್ದಿಮೆ ಪರವಾನಿಗೆ ಹಾಗೂ ನಲ್ಲಿ ನೀರಿಗೆ ವಿಧಿಸುವ ತೆರಿಗೆ ಎಷ್ಟು ; ತೆರಿಗೆ ನಿಗಧಿಪಡಿಸಲು ಸರ್ಕಾರ ನಿಗದಿ ಮಾಡಿರುವ ಮಾನದಂಡಗಳೇನು ; ಈ ಎಲ್ಲಾ ವಾಣಿಜ್ಯ ಮೂಲಗಳಿಂದ ೨೦೧೯ ರಿಂದ ೨೦೨೪ ನವೆಂಬರ್ ವರೆಗೆ ಸಂಗ್ರಹಿಸಲಾದ ಆದಾಯ ಎಷ್ಟು? (ವಿವರ ನೀಡುವುದು)

## ಹಿರಿಯೂರು ಸಕ್ಕರೆ ಕಾರ್ಖಾನೆಯ ಪುನರ್‌ಶ್ಚೇತನಗೊಳಿಸುವ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :-**

೮೮೬ (೯೧೬) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಸಕ್ಕರೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಆ) ಇದ್ದಲ್ಲಿ, ಸರ್ಕಾರ ಒದಗಿಸಿರುವ ಅನುದಾನ ಎಷ್ಟು; ಮತ್ತು ಪುನಃಶ್ಚೇತನಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಹಿರಿಯೂರು ವಾಣಿ ವಿಲಾಸ ಸಾಗರದಲ್ಲಿ ಸಾಕಷ್ಟು ನೀರಿನ ಲಭ್ಯತೆ ಇರುವುದರಿಂದ ಹೆಚ್ಚಿನ ಕಬ್ಬು ಬೆಳೆಯಲು ರೈತರಿಗೆ ಸಹಾಯಕವಾಗುತ್ತದಲ್ಲವೇ ;

(ಈ) ಸಕ್ಕರೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಿದ್ದಲ್ಲಿ, ಸ್ಥಳೀಯರಿಗೆ ಉದ್ಯೋಗಾವಕಾಶ ಲಭಿಸಿದಂತಾಗುವುದಿಲ್ಲವೆ ?

## ತೋಟಗಾರಿಕೆ ಇಲಾಖೆಯ ಯೋಜನೆಗಳ ಅನುಷ್ಠಾನದ ಮಾಹಿತಿ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :-**

೮೮೭ (೯೧೭) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತೋಟಗಾರಿಕೆ ಇಲಾಖೆಯಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ; (ವಿವರಗಳನ್ನು ನೀಡುವುದು)

(ಆ) ೨೦೨೪-೨೫ನೇ ಸಾಲಿನಲ್ಲಿ ಈ ಯೋಜನೆಗಳ ಅನುಷ್ಠಾನಕ್ಕೆ ಮೀಸಲಿಟ್ಟಿರುವ ಅನುದಾನ ಎಷ್ಟು ;

(ಇ) ಈ ಪೈಕಿ ಹಿರಿಯೂರು ವಿಧಾನಸಭಾ ಕ್ಷೇತ್ರಕ್ಕೆ ಒದಗಿಸಿರುವ ಅನುದಾನ ಎಷ್ಟು ;

(ಈ) ಇಲಾಖೆಯ ವಿವಿಧ ಯೋಜನೆಗಳಡಿ ಹಿರಿಯೂರು ವಿಧಾನಸಭಾ ಕ್ಷೇತ್ರದಲ್ಲಿ ಆಯ್ಕೆ ಮಾಡಿರುವ ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

## ಹಿರಿಯೂರು ತಾಲ್ಲೂಕಿಗೆ ಯೋಜನೆ ಪ್ರಾಧಿಕಾರ ನೇಮಿಸುವ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :-**

೮೮೮ (೯೧೮) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಹಿರಿಯೂರು ತಾಲ್ಲೂಕಿನ ಅಭಿವೃದ್ಧಿಗೆ ಹಿರಿಯೂರು ಯೋಜನಾ ಪ್ರಾಧಿಕಾರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದಲ್ಲಿದೆಯೇ ; ಇದ್ದಲ್ಲಿ, ಯಾವಾಗ ಸ್ಥಾಪಿಸಲಾಗುವುದು ? (ವಿವರಿಸುವುದು)

## ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುಸನೂರ ಗ್ರಾಮ ಪಂಚಾಯಿತಿಯಲ್ಲಿನ ಅಭಿವೃದ್ಧಿ ಯೋಜನೆ ಕುರಿತು

**ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) :-**

೮೮೯ (೯೮೪) ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೪ರ ಜೂನ್ ತಿಂಗಳಲ್ಲಿ ನಡೆದ ಸಂಪುಟ ಸಭೆಯ ನಿರ್ಣಯದಂತೆ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಕುಸನೂರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ವಸತಿ ಯೋಜನೆಯಲ್ಲಿ ಕುಸನೂರು ಗ್ರಾಮದ ಯಾವ ಯಾವ ಸರ್ವೆ ನಂಬರುಗಳಲ್ಲಿ ವಸತಿ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು

ತೀರ್ಮಾನಿಸಲಾಗಿದೆ ಹಾಗೂ ಈ ಯೋಜನೆಗಳಿಗೆ ಸರ್ಕಾರ ಮೀಸಲಿಟ್ಟ ಅನುದಾನ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಕಲಬುರಗಿ ನಗರದ ಕುಸನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ.೧೯೪/೧ರಲ್ಲಿನ ನಿವೇಶನಗಳು ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುತ್ತವೆಯೇ ; ಈ ನಿವೇಶನಗಳು ೨೦೦೦-೨೦೦೧ರಲ್ಲಿ ರಾಜ್ಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಗುಲ್ಬರ್ಗಾದಿಂದ ಹಂಚಿಕೆಯಾಗಿದ್ದ ಕಳೆದ ೬-೭ ವರ್ಷಗಳಿಂದ ಈ ನಿವೇಶನಗಳಿಗೆ ತೆರಿಗೆ ಕಟ್ಟಿಕೊಳ್ಳದಿರಲು ಕಾರಣವೇನು ; (ವಿವರ ನೀಡುವುದು)

(ಇ) ಸರ್ವೆ ನಂ.೧೯೪/೧ರ ನಿವೇಶನಗಳು ಸರ್ಕಾರದಿಂದ/ಸಂಘದಿಂದ ಹಂಚಿಕೆಯಾಗಿದ್ದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತಿದ್ದು, ಪ್ರಸ್ತುತ ಈ ನಿವೇಶನಗಳು ಗಾರ್ಡನ್ ಜಾಗವೆಂದು ತಿಳಿಸುತ್ತಿದ್ದರಿಂದ ನಿವೇಶನದ ಖರೀದಿದಾರರು ಆತಂಕಕ್ಕೆ ಒಳಗಾಗುತ್ತಿರುವುದು ನಿಜವೇ ;

(ಈ) ಈ ಸಮಸ್ಯೆಯನ್ನು ಬಗೆಹರಿಸಿ ಪರ್ಯಾಯವಾಗಿ ಯಾವ ಕ್ರಮವನ್ನು ಕೈಗೊಳ್ಳಲಾಗುವುದು ; ಯಾವ ಕಾಲಮಿತಿಯಲ್ಲಿ ಇತ್ಯರ್ಥಪಡಿಸಲಾಗುವುದು ? (ಮಾಹಿತಿಯನ್ನು ಒದಗಿಸುವುದು)

## ರಾಯಚೂರು ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ನಿರ್ಮಿಸಿದ ಕೈಗಾರಿಕಾ ಪ್ರದೇಶಗಳ ಬಗ್ಗೆ

**ಶ್ರೀ ಎ. ವಸಂತಕುಮಾರ (ವಿಧಾನಸಭೆಯಿಂದ ಚುನಾಯಿತರಾದವರು) :-**

೮೯೦ (೧೦೦೭) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಯಚೂರು ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ನಿರ್ಮಾಣ ಮಾಡಲಾದ ಕೈಗಾರಿಕಾ ಪ್ರದೇಶಗಳೆಷ್ಟು ; (ವಿವರ ನೀಡುವುದು)

(ಆ) ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲಾಗಿದೆ ; ಭೂಸ್ವಾಧೀನ ಮಾಡಿಕೊಂಡ ನಂತರ ಅದನ್ನು ಮಂಡಳಿ ವಶಕ್ಕೆ ಪಡೆಯಲಾಗಿದೆಯೇ ; (ವಿವರ ನೀಡುವುದು)

(ಇ) ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆಯೇ ; ಹಾಗಿದ್ದಲ್ಲಿ, ಕಳೆದ ೫ ವರ್ಷಗಳಲ್ಲಿ ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಕೈಗೊಂಡ ಕಾಮಗಾರಿಗಳು ಯಾವ ಹಂತದಲ್ಲಿವೆ ? (ವಿವರ ನೀಡುವುದು)

## ರನ್ನ ಸಕ್ಕರೆ ಕಾರ್ಖಾನೆಯನ್ನು LROT ಮೂಲಕ ಮಾಡಿಕೊಳ್ಳಲಾಗಿದೆಯೇ ಎಂಬುದರ ಕುರಿತು

**ಶ್ರೀ ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) :-**

೮೯೧ (೯೯೯) ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ರನ್ನ ಸಕ್ಕರೆ ಕಾರ್ಖಾನೆಯನ್ನು LROT ಮೂಲಕ ಲೀಜ್ (Lease) ಮಾಡಿಕೊಳ್ಳಲಾಗಿದೆಯೇ ; ಮಾಡಿಕೊಂಡಲ್ಲಿ ಎಷ್ಟು ವರ್ಷಕ್ಕೆ ಯಾವ ನಿಯಮ ಮಾನದಂಡಗಳನ್ನು ಅನುಸರಿಸಲಾಗಿದೆ ; ( ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕೆ.ಟಿ.ಪಿ.ಪಿ (Karnataka Transparency in Public Procurements Act) ನಿಯಮದ ಪ್ರಕಾರ ಟೆಂಡರ್ ಪ್ರಕ್ರಿಯೆಯನ್ನು ಅನುಸರಿಸಲಾಗಿದೆಯೇ ; ಅನುಸರಿಸಿದ್ದಲ್ಲಿ, ಯಾವ

ನಿಯಮದಡಿ ಸದರಿ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ ; ಮಾಹಿತಿ ನೀಡುವುದು ಮತ್ತು ಅನುಸರಿಸದಿದ್ದಲ್ಲಿ, ಬೇರೆ ಯಾವ ಮಾನದಂಡಗಳನ್ನು ಅನುಸರಿಸಲಾಗಿದೆ ; ವಿವರಿಸಿ ಸೂಕ್ತ ಮಾಹಿತಿ ಮತ್ತು ವಿವರಣೆ ನೀಡುವುದು ;

(ಇ) ಸದರಿ ಸಕ್ಕರೆ ಕಾರ್ಖಾನೆಯು ರೈತರಿಗೆ ನೀಡಬೇಕಾದ ಮೊತ್ತವನ್ನು ಸಂಪೂರ್ಣವಾಗಿ ನೀಡಿದೆಂಯೇ ಅಥವಾ ಬಾಕಿ ಉಳಿಸಿಕೊಂಡಿದೆಯೇ ; ಸಂಪೂರ್ಣ ಮಾಹಿತಿ ನೀಡುವುದು ಮತ್ತು ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ರೈತರಿಗೆ ನೀಡಲಾಗುವುದು ತಿಳಿಸಿ ;

(ಈ) ಸದರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡಲಾಗುತ್ತಿದೆಯೇ ; ನೌಕರರ ಸಂಬಳವನ್ನು ಬಾಕಿ ಉಳಿಸಿಕೊಳ್ಳಲಾಗಿದೆಯೇ ; ಯಾವ ಕಾಲಮಿತಿಯೊಳಗೆ ಹಾಕಿ ಉಳಿಸಿಕೊಂಡ ಸಂಬಳವನ್ನು ನೀಡಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಸದರಿ ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಕಬ್ಬು ನುರಿಸುವ ಕಾರ್ಯ ಪ್ರಾರಂಭಿಸಲಾಗಿದೆಯೇ ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O 141/400 ಪ್ರತಿಗಳು/04–12–2024